

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

Volume : 06 | Issue : 306 | Friday 16-08-2024 | E-mail : maruti.b.hosamani76@gmail.com | Page: 4 | Price : Rs. 1/-


## 78ನೇ ಸ್ವಾತಂತ್ರ್ಯ ದಿನಾಚರಣೆ ಆಚರಣೆ



**ಕಲಕೇರಿ :** ಕಲಕೇರಿಯಲ್ಲಿ 78 ನೇ. ಸ್ವಾತಂತ್ರ್ಯ ದಿನಾಚರಣೆ–ಯ ಮೂರು ಶಾಲೆಯ ಅವರಣದಲ್ಲಿ. ಎಂ.ಪಿ.ಎಸ್ ಕನ್ನಡ ಗಂಡು ಮಕ್ಕಳ ಶಾಲೆ. ಕೆ.ಜಿ.ಎಸ್ ಕನ್ನಡ ಹೆಣ್ಣು ಮಕ್ಕಳ ಶಾಲೆ ಯು.ಬಿ.ಎಚ್ ಉರ್ದು ಶಾಲೆ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಬೋದಾನಿಗಳ ಆದಂತ ಡಾ.ವಿ. ಕ. ಜಾಲಹಳ್ಳಿ ಮಠ ಇವರು ವೇದಿಕೆಯನ್ನು ಉದ್ದೇಶಿಸಿ 78 ನೇ. ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಶಾಲೆಯಲ್ಲಿ ಎಲ್ಲಾ ಮಕ್ಕಳು ವಿದ್ಯೆಯನ್ನು ಕಲಿತು ಉನ್ನತ ಮಟ್ಟಕ್ಕೆ ಬೆಳೆಯ ಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಈ ಶಾಲೆಯ ಸಿ.ಆರ್.ಸಿ ಎಸ್. ಎಲ್ ನಾಯ್ಕೋಡಿ 78ನೇ. ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಡಾಕ್ಟರ್, ಬಿ.ಆರ್ ಅಂಬೇಡ್ಕರ್ ಬಾಬಾ ಸಾಹೇಬ್ ಅವರು ಪ್ರತಿಯೊಬ್ಬ ವಿದ್ಯಾರ್ಥಿಗೆ ವಿದ್ಯೆ ಇದ್ದರೆ ಅವನೇ ಬುದ್ಧಿವಂತ ಜ್ಞಾನೋದಯ ಎಂದು ಮಕ್ಕಳಲ್ಲಿ ಪಾಠ ಕಲಿಯುವಾಗ ಛಲ ಇರಬೇಕು ಬಾಬಾ ಸಾಹೇಬರು ಅವರು ತೋರಿಸಿದಂತ ಹಾದಿಯಲ್ಲಿ ನಾವು ನಡೆಯಬೇಕು ಎಂದು ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ತಿಳಿಸಿದರು.

ಕೆ.ಜಿ.ಎಸ್. ಸರ್ಕಾರಿ ಹೆಣ್ಣುಮಕ್ಕಳ ಶಾಲೆಗೆ ಶ್ರೀಮತಿ ಜಯಶ್ರೀ ಬೆಣ್ಣಿ ಶಿಕ್ಷಕರ ಸರಕಾರಿ ನೌಕರ ಬ್ಯಾಂಕ್ ನಿರ್ದೇಶಕರು ವಿಜಯಪುರ ಒಂದು ಕಂಪ್ಯೂಟರ್ ಈ ಶಾಲೆಗೆ ಕೊಡುಗೆಯಾಗಿ ನೀಡಿದ್ದಾರೆ. ಜಗದೀಶ್ ಗುಮಶೆಟ್ಟಿ ಮುಖ್ಯ ಗುರುಗಳು ಎಸ್.ಬಿ ಪ್ರೌಢ ಶಾಲೆ ಕಲಕೇರಿ ಒಂದು ಡ್ರಯಾಸ ಕಾಣಿಕೆಯಾಗಿ ಕೊಟ್ಟಿದ್ದಾರೆ. ನಿಂಗಣ್ಣ ಹೂಗಾರ್ ಕಿರಾಣಿ ವ್ಯಾಪಾರಸ್ಥರು. 500. ಲೀಟರ್ ಸಿಂಟೆಕ್ಸ್ ಶಾಲೆಗೆ ಕಾಣಿಕೆ–ಯಾಗಿ ಕೊಟ್ಟಿದ್ದಾರೆ. ಸುರೇಶ್ ಖಾದಿ 20+15 ಒಂದು ಮ್ಯಾಟ್ ಶಾಲೆಗೆ ಕಾಣಿಕೆಯಾಗಿ ಕೊಟ್ಟಿದ್ದಾರೆ. ಈರಣ್ಣ ಪತ್ತಾರ. ಪಯಸಾಗರ ಜಗ ಶೆಟ್ಟಿ. ದೇವೇಂದ್ರ ಕಡಕೋಳ. ರಾಜು ಅಡಿಕಿ.

ಇವರು ನಾಲ್ಕು ಜನ ಕೂಡಿ ಕೊಂಡು 250 ನೋಟ್ಬುಕ್ ಐವತ್ತು ಪೆನ್ನುಗಳನ್ನು ವಿದ್ಯಾರ್ಥಿಗಳಿಗೆ ವಿತರಣೆ ಮಾಡಿದರು.

ಈ ಮೂರು ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರು. ಚಂದ್ರಕಾಂತ್ ಬಡಿಗೇರ್. ಲಾಳೆ ಮಶಾಕ್ ವಲ್ಲಿಭಾವಿ. ಆನಂದ್ ಅಡಿಕಿ. ಸದಸ್ಯರಾದಂತ ಮಲ್ಲು ನಾವಿ. ಭಾಷಾ ಮೂಲಿಮನಿ. ಬಾಲಪ್ಪ ದೊರಿ. ದೊಡ್ಡಪ್ಪ ಗುಮಶೆಟ್ಟಿ. ಮೋಹನ್ ಟೇಲರ್. ಮಡೆಪ್ಪ ಚಳ್ಳಗಿ. ಮುಸ್ತಪ್ಪ ಸಿಪಾಯಿ. ಶರಣಪ್ಪ ಸುಂಕದ. ಇನ್ನೂ ಅನೇಕರು ಊರಿನ ಗಣ್ಯ ಮಾನ್ಯ ವ್ಯಕ್ತಿಗಳು ಪಾಲ್ಗೊಂಡಿದ್ದರು. ಮೂರು ಶಾಲೆಯ ಮುಖ್ಯ ಗುರುಗಳು ಜೆ.ಬಿ. ಕುಲಕರ್ಣಿ. ಎಸ್ ಬಿ ಪಡಶೆಟ್ಟಿ. ಜ.ಖ.ಸಿರಸಗಿ. ಈ ಶಾಲೆಯ ಶಿಕ್ಷಕರು ಗುರು ಮಾತೆಯವರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ. ಮನಗೂಳಿ.ತಾಳಿಕೋಟೆ.**

## ಧ್ವಜಾರೋಹಣ ನೆರವೇರಿಸಿದ ಮಹಾಂತ ಲಿಂಗ ಶಿವಾಚಾರ್ಯ

**ನಂದವಾಡಗಿ :** ಇಳಕಲ್ಲ ತಾಲೂಕಿನ ನಂದವಾಡಗಿ ಗ್ರಾಮದ ಎಬಿಟಿ ಗುರುಕುಲ ಶಾಲೆಯಲ್ಲಿ 78 ನೇ. ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಹಿರಿಯ ಪೂಜ್ಯರಾದ ತಪೋನಿಧಿ ಷ.ಬ್ರ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಅಭಿನವ ಡಾ ಶ್ರೀ ಚನ್ನಬಸವ ಶಿವಾಚಾರ್ಯರು ಹಾಗೂ ಮಾತೋ ಶ್ರೀ ಗುರುದೇವಿ ಹಿರೇಮಠ ಅವರ ಉಪಸ್ಥಿತಿಯಲ್ಲಿ ಧ್ವಜಾರೋಹಣ ನೆರವೇರಿತು. ಮಠಾಣಿ ಮಕ್ಕಳ ಭಾಷಣ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವು ಶಾಲಾ ಮುಖ್ಯ ಗುರುಗಳು, ಶಿಕ್ಷಕರೊಂದಿಗೆ ಸಡಗರ ಸಂಭ್ರಮದಿಂದ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್.ವಾಯ್.ಕಿಳ್ಳಿ.ಇಲಕಲ್ಲ.**



## ಸಡಗರ ಸಂಭ್ರಮದಿಂದ 78ನೇ ಸ್ವಾತಂತ್ರ್ಯೋತ್ಸವ ಧ್ವಜಾರೋಹಣ



**ಖಾನಾ ಹೊಸಹಳ್ಳಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಖಾನಾ ಹೊಸಹಳ್ಳಿ ಹೋಬಳಿಯ ಖಾನಾ ಹೊಸಹಳ್ಳಿ ಗ್ರಾಮದ ಕನ್ನಡ ಭವನದ ಆವರಣದಲ್ಲಿ ಸ್ವಾತಂತ್ರ್ಯೋತ್ಸವದ ಕನ್ನಡ ಸಾಹಿತ್ಯ ಪರಿಷತ್ತಿನ ಹೋಬಳಿ ಘಟಕದ ಅಧ್ಯಕ್ಷರಾದ ಎನ್ ಎಸ್ ತಿಪ್ಪೇಸ್ವಾಮಿ ಧ್ವಜಾರೋಹಣ ನೆರವೇರಿಸಿದರು.

ನಂತರ ಮಾತನಾಡಿ ಅನೇಕ ಹುತಾತ್ಮರ ತ್ಯಾಗ ಬಲಿದಾನದ ಪ್ರತೀಕ ನಮಗೆ ಸ್ವಾತಂತ್ರ್ಯ ದೊರೆತಿದೆ. ಪ್ರತಿಯೊಬ್ಬ ಭಾರತೀಯರು ಸ್ವತಂತ್ರ ಹೋರಾಟದಲ್ಲಿ ಮಡಿದ ದೇಶದ ಮಹನೀಯರ ಸ್ಮರಣೆ ಮನಃ ಪೂರ್ವಕವಾಗಿ ಮಾಡಬೇಕು. ಆ ಹಿರಿಯ ಚೇತನ ಶಕ್ತಿಗಳು ಚೆಲ್ಲಿದ ರಕ್ತ ಪ್ರಾಣದಿಂದ ಇಂದು ನಾವುಗಳು ದೇಶದಲ್ಲಿ ನೆಮ್ಮದಿಯಿಂದ ಉಸಿರಾಡುತ್ತಿದ್ದೇವೆ. ನಮ್ಮ ದೇಶ ಬಹು ಗ್ರಾಮಗಳನ್ನು ಹೊಂದಿರುವ ಬಲಿಷ್ಠ ದೇಶಾಭಿಮಾನದ ಒಗ್ಗಟ್ಟು ಎಲ್ಲಾ ಜನಸ್ತೋಮ ಅಭಿಮಾನದಿಂದ ಎಂದು ತಿಳಿಸಿದರು. ವಿವಿಧತೆಯಲ್ಲಿ ಏಕತೆ ಇದ್ದ–ರೆ ಭಾರತೀಯರು ಮೌಲ್ಯ ಹಾಗೂ ದೇಶದ ಘನತೆ. ಗೌರವ ಹೆಚ್ಚುವುದು. ಇಂದಿನ ಮಕ್ಕಳೇ ಭವಿಷ್ಯತ್ತಿನ ಕಿರಣಗಳು ಅವರಲ್ಲಿ ಒಳ್ಳೆಯ ಸಂಸ್ಕಾರ ಸಂಪ್ರದಾಯ ಸಂಸ್ಕೃತಿ ಭವ್ಯ ಭಾರತ ದೇಶದ ಪರಿಕಲ್ಪನೆ ಮೂಡಿಸುವುದು ಇಂದಿನ ವಿದ್ಯಾರ್ಥಿಗಳಿಗೆ ಅಗತ್ಯ ಎಂದರು.

ಇದೇ ಸಂದರ್ಭದಲ್ಲಿ ಹೊಸಹಳ್ಳಿ ಕನ್ನಡ ಭವನದ ಸ್ಥಳ ದಾನಿಗಳಾದ ಎಚ್ ಕೆ ವೆಂಕಟೇಶ್ವರ ರಾವ್. ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಸಹ ಕಾರ್ಯದರ್ಶಿ. ಕೆ ಸುಭಾಷ್ ಚಂದ್ರ. ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಕಾರ್ಯದರ್ಶಿ ಶಾಮ ಸುಂದರ ಸ ಪಾರೆ. ಹೋಬಳಿ ಘಟಕದ ಕೋಶ ಅಧ್ಯಕ್ಷರಾದ ರಾಮಕೃಷ್ಣ ಸಫಾರೆ. ಶರಣನಗೌಡ. ವೈಭವ ಶಾಲೆಯ ಮುಖ್ಯ ಗುರುಗಳಾದ ಪ್ರಕಾಶ್. ಕರಿ ಬಸಣ್ಣ. ವಿದ್ಯಾರ್ಥಿಗಳು ಸಾರ್ವಜನಿಕ ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್. ಕೆ.ಹೊಸಹಳ್ಳಿ.**

## ಜಮಖಂಡಿ ಶಾಸಕ ಜಗದೀಶ್ ಗುಡುಗುಂಟಿ ವಿರುದ್ಧ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯಿಂದ ಭಾರಿ ಪ್ರತಿಭಟನೆ



**ಜಮಖಂಡಿ :** ಕ್ಷೇತ್ರದ ಶಾಸಕ ಜಗದೀಶ್ ಗುಡುಗ–ಂಟಿ ವಿರುದ್ಧ ನಗರದ ದೇಸಾಯಿ ವೃತ್ತದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆ ಹಾಗೂ ಕರ್ನಾಟಕ ಪ್ರೆಸ್ ಕ್ಲಬ್ ಜಂಟಿಯಾಗಿ ಭಾರಿ ಪ್ರತಿಭಟನೆಯನ್ನು ಮಾಡಿದರು . ಈ ಪತ್ರಕರ್ತರ ಸಂಘಟನೆಗೆ ನಗರದ ವಿವಿಧ ದಲಿತ ಪರ ಸಂಘಟನೆಗಳ ಒಕ್ಕೂಟದಿಂದ ಭಾರಿ ಬೆಂಬಲ ವ್ಯಕ್ತವಾಯಿತು.

ಈ ಪ್ರತಿಭಟನೆಯ ಸಂದರ್ಭದಲ್ಲಿ ಮಾಧ್ಯಮ ರೊಂದಿಗೆ ಮಾತನಾಡಿದ ಕಾನಿಪ ಧ್ವನಿ ಸಂಘಟನೆಯ ಜಿಲ್ಲಾ ಅಧ್ಯಕ್ಷ ಆರ್ ಡಿ ಬಾಬು ಅವರು , ಶಾಸಕ ಜಗದೀಶ್ ಗುಡುಗುಂಟೆ ಅವರೇ ಯಾವುದೇ ಸಂಘ ಸಂಸ್ಥೆಗಳು ಹಾಗೆ ಕಾಲ್ಪನಿಕವಾಗಿ ಹುಟ್ಟಿ ಕೊಳ್ಳುವುದಿಲ್ಲ , ಒಂದು ವೇಳೆ ಹುಟ್ಟಿದರೆ ಅದು ರಜಿಸ್ಟರ್ ಆಗಿ ಹುಟ್ಟಿಕೊಳ್ಳುತ್ತವೆ . ಹೀಗಾಗಿ ಶಾಸಕರೇ ನೀವು ಈ ಚಿಕ್ಕ ವಿಷಯಕ್ಕೆ ಪತ್ರಿಕಾ ನಮ್ಮ ಕಾನಿಪಧ್ವನಿ ಸಂಘಟನೆಗೆ ಕ್ಷಮಾಪಣೆ ಕೇಳದಿದ್ದರೆ ಬಾಗಲಕೋಟೆ ಜಿಲ್ಲೆಯ ಅದ್ಯಂತ ಅಲ್ಲ ಇಡೀ ರಾಜ್ಯದ್ಯಂತ ಹೋರಾಟ ಟನಡೆಸಬೇಕಾಗುತ್ತದೆ. ಇದಲ್ಲದೆ ನಿಮಗೆ ಎಚ್ಚರಿಕೆಯನ್ನು ಕೂಡ ಕೊಡ್ತಾ ಇದ್ದೇವೆ ಏನೆಂದರೆ ಪತ್ರಿಕಾ ಸಂಘಟನೆಯ ಹಾಗೆ ಹೋರಾಟಕ್ಕೆ ಮುಕ್ತಗೊಳಿಸಿ ಇಲ್ಲವಾದಲ್ಲಿ, ನೀವು ಎಲ್ಲಿಯೂ ಹೋದರೂ ಕಪ್ಪು ಬಾವುಟದ ಹೋರಾಟ ಪ್ರಾರಂಭವಾಗುತ್ತದೆ ಒಬ್ಬ ಕ್ಷೇತ್ರದ ಶಾಸಕರಾಗಿ ಪತ್ರಿಕಾ ಮಾಧ್ಯಮ ರವರಿಗೆ ಮಾಧ್ಯಮ ಪತ್ರಿಕಾ ಸಂಘ ರಜಿಸ್ಟರ್ ಬಗ್ಗೆ ಹಾಗೂ ಅವಹೇಳನಕಾರಿಯಾಗಿ ಮಾತುಗಳನ್ನು ಆಡುತ್ತೀರಿ ಅಂದರೆ ನಿಮಗೆ ನಾಚಿಕೆ ಆಗಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು .

ಈ ಸಂದರ್ಭದಲ್ಲಿ ಕರ್ನಾಟಕ ಪ್ರೆಸ್ ಕ್ಲಬ್ ಅಧ್ಯಕ್ಷ ಶಶಿಕಾಂತ್ ತೆರದಾಳ, ಕಾರ್ಯ ನಿರತ ಪತ್ರಕರ್ತರ ಧ್ವನಿ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಜಾವಿದ್ ಮುಜಾವರ್,

ತಾಲೂಕ ಅಧ್ಯಕ್ಷ ರವಿ ದೊಡಮನಿ, ಹಾಗೂ ಜಿಲ್ಲಾ ಕಾನಿಪ ಧ್ವನಿ ಸಂಘಟನೆಯ ಸದಸ್ಯರು ಮತ್ತು ರಬಕವಿ ಬನಹಟ್ಟಿ ತಾಲೂಕ ಕಾನಿಪ ಧ್ವನಿ ಸಂಘಟನೆ ಸದಸ್ಯ ಮಹಿಬೂಬ್ ಬಾರಿಗಡ್ಡಿ , ವಿವಿಧ ದಲಿತ ಸಂಘಟನೆಗಳ ಒಕ್ಕೂಟದ ಮುಖಂಡರುಗಳು ಹಾಗೂ ಸದಸ್ಯರು ಹಾಜರಿದ್ದರು.

## ಕಾಲುವೆ ನೀರು ಜಮೀನಿಗೆ ನುಗ್ಗಿ ಅಪಾರ ಬೆಳೆ ನಷ್ಟ



**ತಾಳಿಕೋಟಿ :** ತಾಲೂಕಿನ ಗಡಿ ಸೋಮನಾಳ ಎಲ್ಟಿ–1ರಲ್ಲಿ ಜಮೀನುಗಳಿಗೆ ದೊಡ್ಡ ಪ್ರಮಾಣದಲ್ಲಿ ಕ್ಯಾನಲ್ ನೀರು ಹರಿದು ರೈತರಿಗೆ ಅಪಾರ ನಷ್ಟ ಸಂಭವಿಸಿದೆ. ಗಡಿ ಸೋಮನಾಳ ಎಲ್ಟಿ–1 ರ ರೈತ ವಿನೋದ್ ಕುಮಾರ ನಾಯಕ ಸರ್ವೆ ನಂಬರ್ 37/1, ವಿಶ್ವನಾಥ ನಾಯಕ 37/3, ವಿಜಯಕುಮಾರ್ ನಾಯಕ 37/4, ಗಡಿ ಸೋಮನಾಳ ಗ್ರಾಮದ ಮಲ್ಲಿಕಾರ್ಜುನ ಬಿ ಕೋಟಿಕಾನಿ 36/1, ಶಾಂತಮ್ಮ ಕೋಟಿಕಾನಿ 35/4, ಚಂದ್ರಶೇಖರ್ ವಾಸುದೇವ ಲಮಾಣಿ 36/3,

ಹಾಗೂ ಕುತ್ತು ಅವಟಿ ಇವರ ಜಮೀನಿನಲ್ಲಿ ಭಾರಿ ಪ್ರಮಾಣದಲ್ಲಿ ಕೆನಲ್ ನೀರು ನುಗ್ಗಿ ಅಪಾರ ಪ್ರಮಾಣದ ಬೆಳೆ ನಷ್ಟವಾಗಿದೆ. ಈ ಬಾರಿ ಈ ಭಾಗದಲ್ಲಿ ವಾಡಿಕೆ ಗಿಂತ ಹೆಚ್ಚು ಮಳೆ ಆಗುವುದರ ಜೊತೆಗೆ ನದಿಗೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬಂದಿರುವುದರಿಂದ ಕಾಲುವೆಗಳಿಗೆ ನೀರು ಹರಿಸಲಾಗಿದೆ ಕಾಲುವೆ ತಟದಲ್ಲಿರುವ ಜಮೀನುಗಳಿಗೆ ದೊಡ್ಡ ಪ್ರಮಾಣದಲ್ಲಿ ನೀರು ಹರಿದು ಬಂದಿದೆ

ಇದರಿಂದ ಸುಮಾರು ಆರರಿಂದ ಏಳು ಎಕ–ರೆ ಹತ್ತಿ ಬೆಳೆ ಸಂಪೂರ್ಣ ಮುಳುಗಿ ಹೋಗಿ ಸುಮಾರು 25 ಎಕರೆಗಿಂತಲೂ ಹೆಚ್ಚು ಭೂಮಿ ಇದರಿಂದ ಪ್ರಭಾವಿತವಾಗಿ ಅಪಾರ ನಷ್ಟ ಆಗಿದೆ. ರೈತರು ಈಗಾಗಲೇ ತೀವ್ರ ಆರ್ಥಿಕ ಸಮಸ್ಯೆಯನ್ನು ಎದುರಿಸುತ್ತಿದ್ದು ಸಾಲ ಮಾಡಿ ಬಿತ್ತಿದ ಬೆಳೆ ಈಗ ಸಂಪೂರ್ಣ ನಾಶವಾಗಿ ಹೋಗಿರುವುದರಿಂದ ಕಂಗಾಲಾಗಿ ಹೋಗಿದ್ದಾರೆ.

ಇವರಿಗೆ ಧೈರ್ಯ ತುಂಬುವ ಕೆಲಸ ಸರ್ಕಾರದಿಂದಾಗಬೇಕಾಗಿದೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಇವರ ಜಮೀನುಗಳಿಗೆ ಭೇಟಿ ನೀಡಿ ಸಂಭವಿಸಿದ ಹಾನಿಯನ್ನು ಪರಿಶೀಲಿಸಿ ಪರಿಹಾರವನ್ನು ಒದಗಿಸಬೇಕಾಗಿದೆ.

## ಸೌಲಭ್ಯ ಸದುಪಯೋಗ ಮಾಡಿಕೊಳ್ಳಿ: ಯೋಜನಾಧಿಕಾರಿ ನಾಗೇಶ



**ತಾಳಿಕೋಟಿ :** ಸಮೀಪದ ಹಿರೂರ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿಯೋಜನೆ ಬಿ ಸಿ ಟ್ರಸ್ಟ್ ಮುದ್ದೇಬಿಹಾಳ ಇವರಿಂದ ಸ್ವಸಹಾಯ ಸಂಘಗಳ ಒಕ್ಕೂಟ ಸಭೆ ಮಂಗಳವಾರ ಜರುಗಿತು. ಸಭೆಯಲ್ಲಿ ಸ್ವಸಹಾಯ ಸಂಘಗಳ. ಆರ್ಥಿಕ ವ್ಯವಹಾರಗಳ ಬಗ್ಗೆ. ಒಕ್ಕೂಟ ಬಲವರ್ಧನ ತಂಡದ ದಾಖಲಾತಿಗಳ. ನಿರ್ವಹಣಾ ಸ್ವ ಸಹಾಯ ಸಂಘಗಳ ಕುಟುಂಬ ಅಭಿವೃದ್ಧಿ ಯೋಜನೆಗಳ ಕುರಿತು ಮಾಹಿತಿ ನೀಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಯೋಜನಾಧಿಕಾರಿ ನಾಗೇಶ ಎನ್ ಪಿ ಅವರು ಮಾತನಾಡಿ ಸಂಘವು ಸಮಾಜದಲ್ಲಿರುವ ಬಡ ಹಾಗೂ ಮಧ್ಯಮ ವರ್ಗದ ಜನರನ್ನು ಆರ್ಥಿಕವಾಗಿ ಸಬಲೀಕರಿಸಲು ಸಾಕಷ್ಟು ಯೋಜನೆಗಳನ್ನು ಹೊರ ತಂದಿದೆ ಇದರ ಸೌಲಭ್ಯವನ್ನು ಮಾಡಿಕೊಳ್ಳಬೇಕು ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಹಿರೂರ ಮತ್ತು ತಮದಡ್ಡಿ ಗ್ರಾಮದ ವಿಕಲಚೇತನರಿಗೆ ಧರ್ಮಸ್ಥಳ ಸಂಘದಿಂದ ಬಂದ ವಿವಿಧ ಸಲಕರಣೆಗಳನ್ನು ವಿತರಿಸಿದರು ಹಾಗೆ ಸುಜ್ಞಾನ ಶಿಷ್ಯವೇತನ ಕಾರ್ಯಕ್ರಮ ಅಡಿಯಲ್ಲಿ. ಸ್ವಸಹಾಯ ಸಂಘದ ತಾಯಂದಿರ ಮಕ್ಕಳು ವೃತ್ತಿಪರ ಶಿಕ್ಷಣ ಮಾಡುತ್ತಿದ್ದವರಿಗೆ. ಮಂಜುರಾಗಿರುವ ಶಿಷ್ಯವೇತ ಪತ್ರವನ್ನು ಒಕ್ಕೂಟ ಪದಾಧಿಕಾರಿಗಳು ಮತ್ತು ಯೋಜನಾಧಿಕಾರಿಗಳು ವಿತರಿಸಿದರು. ಈ ಸಮಯದಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಶ್ರೀಮತಿ ರಮಜಾನಬಿ ಮೂಕಿಹಾಳ.ವಲಯದ ಮೇಲ್ವಿಚಾರಕರಾದ ಕುಮಾರಿ ನೇತ್ರಾವತಿ

ಹಾಗೂ ,ಸೇವಾ ಪ್ರತಿನಿಧಿಯಾದ ಶ್ರೀಮತಿ ದಿಲ್ ಶಾದ ಕಲ್ಯೆಗಾರ ಯಲ್ಲಮ್ಮ ದೊಡಮನಿ ,ಕವಿತಾ ಬಿರಾದಾರ,ಮಡಿವಾಳಮ್ಮ

ಪೂಜಾರಿ, ಮಧುಮತಿ ಇಂಗಳಗೇರಿ ಹಾಗೂ ಗ್ರಾಮ ಮಟ್ಟದ ಉದ್ಯೋಗಿ (ವಿಎಲ್ಇ) ಯಾದ ಶ್ರೀಮತಿ ವಿಜಯಲಕ್ಷ್ಮೀ ಸೂಡಿ. ಸುವಿದಾಸಹಕರು ಬಿಬಿಜಾನ್ ಮುಕಿಹಾಳ ಹಾಗೂ ಸಂಘದ

## ಸ್ವಾತಂತ್ರ್ಯ ಅಮೃತ್ ಮಹೋತ್ಸವದ ಹಿನ್ನೆಲೆಯಲ್ಲಿ "ಹರ ಘರ್ ತಿರಂಗ ಅಭಿಯಾನ"



**ರಬಕವಿ ಬನಹಟ್ಟಿ :** ತಾಲೂಕಿನ ಬನಹಟ್ಟಿ ನಗರದಲ್ಲಿ, ಜಿಲ್ಲಾ ಆಡಳಿತ ನಗರಾಭಿವೃದ್ಧಿ ಕೋಶ ಹಾಗೂ ತಾಲೂಕ ಆಡಳಿತ ಹಾಗೂ ನಗರಸಭೆ ರಬಕವಿ – ಬನಹಟ್ಟಿ ಇವರ ಸಂಯುಕ್ತ ಆಶ್ರಯದಲ್ಲಿ ಸ್ವಾತಂತ್ರದ ಅಮೃತ್ ಮಹೋತ್ಸವದ ಹಿನ್ನೆಲೆಯಲ್ಲಿ ಹರ್ ಘರ್ ತಿರಂಗ ಯಾತ್ರೆ ನಡೆಯಿತು.

ಈ ಯಾತ್ರೆ ನಗರದ ಮುಖ್ಯ ಬೀದಿಗಳಲ್ಲಿ ಹಾಯ್ದು ಬಸ್ ನಿಲ್ದಾಣದ ಹತ್ತಿರ ಮಾನವ ಸರ್ಪಳಿಯನ್ನು ಹಾಕಿ , ವಿದ್ಯಾರ್ಥಿಗಳು ಭಾರತ್ ಮಾತಾ ಕಿ ಜೈ ಎಂದು ಘೋಷಣೆಗಳನ್ನು ಕೂಗುವುದರ ಮೂಲಕ ಮಂಗಳವಾರ ಪೇಟ್ ಮೂಲಕ ತೆರಳಿತು.

ಈ ಸಂದರ್ಭದಲ್ಲಿ ನಗರದ ವಿವಿಧ ಸರ್ಕಾರಿ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರು ಶಿಕ್ಷಕ ಶಿಕ್ಷಕಿಯರು ಉಪಸ್ಥಿತರಿದ್ದರು.

## ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಢವಳಗಿ ಗ್ರಾಮ ಪಂಚಾಯತಿಯ ದ್ವಿತಿಯ ದರ್ಜೆ ಲೆಕ್ಕಸಹಾಯಕ ಎಮ್ ಕೆ ಗುಡಿಮನಿ ಆಯ್ಕೆ

**ಮುದ್ದೇಬಿಹಾಳ :** ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬೆಂಗಳೂರು ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅವರ ಸಹಯೋಗದಲ್ಲಿ ಅಗಸ್ಟ 17,18,19 ರಂದು ಬೆಂಗಳೂರಿನ ಶ್ರೀ ಕಂಠೀರವ ಹೊರಂಗಾಣ ಕ್ರೀಡಾಂಗಣದಲ್ಲಿ ನಡೆಯುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾ ಹಾಗೂ ಸಂಸ್ಕೃತ ಸ್ಪರ್ಧೆಗಳಲ್ಲಿ ವಿಜಯಪೂರ ಜಿಲ್ಲೆಯಿಂದ ವ್ಯಯಕ್ತಿಕ ಆಟಗಳಲ್ಲಿ ಪುರುಷರ ವಿಭಾಗದಲ್ಲಿ ಗುಂಡು ಎಸೆತ,ಚಕ್ರ

ಎಸೆತ,ಉದ್ದ ಜಿಗಿತದಲ್ಲಿ ಮತ್ತು ಕಬ್ಬಡ್ಡಿ ಆಟದಲ್ಲೂ ವಿಜಯಪುರ ಕಬ್ಬಡ್ಡಿ ತಂಡದ ನಾಯಕರಾಗಿ ಮುದ್ದೇಬಿಹಾಳ ತಾಲ್ಲೂಕಿನ ಢವಳಗಿ ಗ್ರಾಮ ಪಂಚಾಯತಿಯ ದ್ವಿತಿಯ ದರ್ಜೆ ಲೆಕ್ಕ ಸಹಾಯಕರಾದ ಎಮ್ ಕೆ ಗುಡಿಮನಿ



ಅವರು ಆಯ್ಕೆಯಾಗಿದ್ದಾರೆ ಎಂದು ಸಹಾಯಕ ನಿರ್ದೇಶಕರು,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವಿಜಯಪುರ ಅವರು ಆದೇಶ ಹೊರಡಿಸಿದ್ದಾರೆ.

# ಬೆಳೆಯುವ ಸಿರಿ ಮೊಳಕೆಯಲ್ಲಿ: ಹ.ಮ ಪೂಜಾರಿ



**ಇಂಡಿ :** ಬೆಳೆಯುವ ಸಿರಿ ಮೋಳಕೆಯಲ್ಲಿ ಎಂಬ ನಾಣ್ಣುಡಿಯಂತೆ ಮಕ್ಕಳಿಗೆ ಒಳ್ಳೇಯ ಅಭಿರುಚಿ, ಆಸಕ್ತಿ ಮಾನವೀಯ ಮೌಲ್ಯಗಳನ್ನು ಬೆಳೆಸಬೇಕಾದರೆ ಮಕ್ಕಳಲ್ಲಿ ಸಾಹಿತ್ಯ ಚಟುವಟಿಕೆಗಳು ಮೈದಳೆಯುವಂತಾಗಬೇಕು. ಮಕ್ಕಳೇ ದೇಶ ಆಸ್ತಿ ಇಂದಿನ ಮಕ್ಕಳು ನಾಡಿನ ನಾಡಿನ ಪ್ರಭುಗಳು ಸಾಹಿತ್ಯದ ಮೂಲಕ ಸಂಸ್ಕಾರ ನೀಡಿ ಎಂದು ಹಿರಿಯ ಮಕ್ಕಳ ಸಾಹಿತಿ ಹ.ಮ ಪೂಜಾರಿ ಹೇಳಿದರು.

ವಿಜಯಪೂರ ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ ತಾಲೂಕಾ ಘಟಕ ಇಂಡಿ,ಶ್ರೀಮತಿ ರಮಾಬಾಯಿ ಪ್ರೌಢ ಶಾಲೆಯ ಸಭಾಭವನದಲ್ಲಿ ಹಮ್ಮಿಕೊಂಡ ಮಕ್ಕಳ ಸಾಹಿತ್ಯ ಸಂಗಮ ತಾಲೂಕಾ ಘಟಕ ಇಂಡಿ, ಪದಗ್ರಹಣ ಸಮಾರಾಂಭದ ಉದ್ಘಾಟಕರಾಗಿ ಮಾತನಾಡಿದ ಅವರು ಮಕ್ಕಳ ವಿಕಾಸಕ್ಕೆ ಒಳ್ಳೇಯ ಸಂಸ್ಕಾರ ಮುಖ್ಯ ಇಂತಹ ಸಂಸ್ಕಾರ ಪಡೆಯಬೇಕಾದರೆ ಮಕ್ಕಳ ಸಾಹಿತ್ಯದಿಂದ ಸಾಧ್ಯೆ. ಮಕ್ಕಳಲ್ಲಿ ಅಡಿಗಿರುವ ಸುಪ್ತ ಶಕ್ತಿ ಹೊರಬರಬೇಕಾದರೆ ಇಂತಹ ಅವಕಾಶಗಳು ಮಕ್ಕಳಿಗೆ ಕೊಡಬೇಕು. ಮಕ್ಕಳು ದೇವರ ಸಮಾನ ದೇವರ ಎಲ್ಲಿ ಇದ್ದಾನೋ ಗೊತ್ತಿಲ್ಲ ಆದರೆ ಕಣ್ಣಿಗೆ ಕಾಣುವ ದೇವರೇಂದರೆ ಮಕ್ಕಳು ಇವರ ಸೇವೆಯಲ್ಲಿ ದೇವರನ್ನು ಕಾಣಬೇಕು. ಮಕ್ಕಳ ಸರ್ವೋತೋಮುಖ ಅಭಿವೃದ್ಧಿಗೆ ಶ್ರಮಿಸಿದರೆ ದೇವರು ನಿಮ್ಮ ಕುಟುಂಬಕ್ಕೆ ಒಳ್ಳೇಯದನ್ನು ಕರುಣಿಸುತ್ತಾನೆ ಎಂದರು.ಮುಂಬರುವ ದಿನಗಳಲ್ಲಿ ಮಕ್ಕಳ ಸಾಹಿತ್ಯ ಸಂಗಮ ಸಮ್ಮೇಳನ ಬೃಹತ್ ಪ್ರಮಾಣದಲ್ಲಿ ನಡೆಯಲಿ ಎಂಬ ಆಶಾಭಾವನೆ ವ್ಯಕ್ತಪಡಿಸಿದರು.

ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ ಕಾರ್ಯದರ್ಶಿ ಎಸ್.ಎಸ್ ಸಾತಿಹಾಳ ಮುಖ್ಯ ಅತಿಥಿಗಳಾಗಿ ಮಾತನಾಡಿ ಇಂಡಿ ತಾಲೂಕು ಗಡಿಭಾಗದ ಜಾನಪದ ಸಾರಸ್ವತ್ವ ಲೋಕಕ್ಕೆ ನೀಡಿದ ಕೊಡುಗೆ ಅನನ್ಯ ಹಲಸಂಗಿ ಗೆಳೆಯರಾದ ಮಧುರಚೆನ್ನ, ಸಿಂಪಿಲಿಂಗಣ್ಣ, ಧೂಲಾಸಾಹೇಬ , ನಾಟಕ ಬ್ರಹ್ಮ ಅಗರಖೇಡದ ಶ್ರೀರಂಗರು ಸಾಹಿತ್ಯವನ್ನು ನಾಡಿಗೆ ಕೃಷಿ ಮಾಡಿದ್ದಾರೆ ಇಂಡಿ ಸಾಧು ಸಂತರ ,ಶರಣರ ಕವಿಗಳ ,ಸಾಹಿತಿಗಳ ಪುಣ್ಯದ ನೆಲ ಸಾಹಿತಿಗಳ ಬೀಡು ಎಂದರೆ ತಪ್ಪಾಗುವುದಿಲ್ಲ.

1989ರಲ್ಲಿ ಮಕ್ಕಳ ಸಾಹಿತ್ಯ ಸಂಗಮ ಘಟಕ ಹುಟ್ಟು ಹಾಕಲಾಗಿದೆ. ವಿಜಯಪೂರ ಜಿಲ್ಲೆಯ ಮಕ್ಕಳ ಸಾಹಿತ್ಯ ಸಂಗಮ ಹುಲಸಾಗಿ ಬೆಳೆಯಲು ಅನೇಕ ಪೂರ್ವಜನರ ಕೊಡುಗೆ ಇದೆ ಎಂದರು.

ಮಕ್ಕಳು ಬೆಣ್ಣೆ ಮುದ್ದೆ ಇದ್ದ ಒಳ್ಳೇಯ ಸಂಸ್ಕಾರ ಮಾನವೀಯ ಮೌಲ್ಯಗಳನ್ನು ಬಿತ್ತಬೇಕು. ಮಕ್ಕಳ ಸಾಹಿತಿಗಳಾದವರು ಮಕ್ಕಳ ಪರಕಾಯಪ್ರವೇಶ ಮಾಡಬೇಕು . ಮಕ್ಕಳ ಸಾಹಿತ್ಯದಲ್ಲಿ ಅವರ ಪ್ರತಿಭೆಗಳನ್ನು ಗುರುತಿಸಿ ಸೂಕ್ತ ವೇದಿಕೆ ಸಿದ್ದಪಡಿಸಿ ಅಂತರಿಕ ಶಕ್ತಿ ಹೊರಹಾಕಬೇಕು ಇಂಡಿ ಸಾಹಿತಿಕ ನೆಲೆಬೀಡು ಮಕ್ಕಳ ಸಾಹಿತಿಕ ಸಂಗಮ ರಚನಾತ್ಮವಾಗಿ ನಡೆಯಲಿ ಪ್ರತಿಹಂತದಲ್ಲಿ ಸಹಾಯ ಸಹಕಾರ ನೀಡುವುದಾಗಿ ವಿಜಯಪೂರ ಮಕ್ಕಳ ಸಾಹಿತ್ಯ ಸಂಗಮ ಜಿಲ್ಲಾ ಅಧ್ಯಕ್ಷ ಎ.ಆರ್ ಹೆಗ್ಗನದೊಡಿ ಮಾತನಾಡಿದರು.

ಮುಖ್ಯಗುರು ಎಸ್.ಆಯ್ ಹಿರೇಮಠ, ಮಕ್ಕಳ ಸಾಹಿತ್ಯ ಸಂಗಮದ ತಾಲೂಕಾ ಘಟಕದ ನೂತನ ಅಧ್ಯಕ್ಷ ಸದಾನಂದ ಈರನಕೇರಿ ಮಾತನಾಡಿದರು. ಇಂಡಿ ಓಂಕಾರಾಶ್ರಮದ ಡಾ. ಸ್ವರೂಪಾನಂದ ಮಹಾಸ್ವಾಮಿಗಳು ದಿವ್ಯಸಾನಿಧ್ಯವಹಿಸಿ ಅರ್ಶೀವಚನ ನೀಡಿದರು.

ಹಿರಿಯ ಸಾಹಿತಿ ಡಿ.ಎನ್ ಅಕ್ಕಿ , ಗಂಗಾಗಲಗಲಿ, ಬಿ.ಎಸ್ ಪಾಟೀಲ, ಎಸ್.ಆಯ್ ಸುಗೂರ, ಶರಣಬಸಪ್ಪಾ.ಎನ್ ಕಾಂಬಳೆ ವೇದಿಕೆಯಲ್ಲಿದ್ದರು.

ವಿಜಯಲಕ್ಷ್ಮೀ ಕ್ಷತ್ರಿ, ಪಾರ್ವತಿ ಸೊನ್ನದ , ಜೆ.ಡಿ ಪೂಜಾರ, ಕೃಷ್ಣಾ ಎಚ್, ವ್ಹಿ ಎಮ್ ಸಿಂಧೆ, ಅಶೋಕ ಬಿರಾದಾರ, ಡಿ.ಎಸ್ ಹಿರೇಮಠ, ಎಸ್.ಎಸ್ ಕಡಣಿ, ಎ.ಬಿ ಪಾಟೀಲ, ಪ್ರಕಾಶ ಕರಿಗಣ್ಣನವರ್, ಎಸ್.ಎಂ ಖಾಜಿ, ಶಿಕ್ಷಕ ಗೋಟ್ಯಾಳ ಶ್ಯಾಮ ಬೆನಕನಹಳ್ಳಿ ಸೇರಿದಂತೆ ಮಕ್ಕಳ ಸಾಹಿತ್ಯ ಸಂಗಮ ಪದಾಧಿಕಾರಿಗಳು ಹಾಗೂ ಶ್ರೀಮತಿ ರಮಾಬಾಯಿ ಪ್ರೌಢ ಶಾಲೆಯ ಶಿಕ್ಷಕರು, ವಿಧ್ಯಾರ್ಥಿ, ವಿಧ್ಯಾರ್ಥಿನಿಯವರು ಉಪಸ್ಥಿತರಿದ್ದರು.

# ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಶಿಕ್ಷಕರ ಸಂಘದಿಂದ ಮನವಿ

**ತಾಳಿಕೋಟೆ :** 2017 ಹೊಸ ವೃಂದ ನೇಮಕಾತಿ ಮತ್ತು ಅರ್ಹ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿ ನೀಡುವ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಜೇಷ್ಠತೆ ಆಧಾರದ ಮೇಲೆ ಬಡ್ತಿ ಸೇರಿದಂತೆ ವಿವಿಧ ಬೇಡಿಕೆಗಳ ಇಡೇರಿಕೆಗಾಗಿ ತಾಲೂಕಾ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೇತೃತ್ವದಲ್ಲಿ ನೂರಾರು ಶಿಕ್ಷಕರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ತಹಶಿಲ್ದಾರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.



ಕರ್ನಾಟಕ ರಾಜ್ಯವು ಶಾಲಾ ಶಿಕ್ಷಣದಲ್ಲಿ ಅನೇಕಹೊಸಉಪಕ್ರಮಗಳನ್ನುತರುವುದರ ಮೂಲಕ ದೇಶದಲ್ಲಿ ಮಾದರಿಗಳನ್ನು ನಿರ್ಮಿಸಿದೆ, ಕಾಲಕಾಲಕ್ಕೆ ಆಗುವ ಶೈಕ್ಷಣಿಕ ಬದಲಾವಣೆಗಳನ್ನು ನಮ್ಮ ರಾಜ್ಯದಲ್ಲೂ ಶಾಲಾ ಶಿಕ್ಷಣ ಇಲಾಖೆ ಸಮರ್ಪಕವಾಗಿ ನಿರ್ವಹಿಸುತ್ತಾ ಬಂದಿರುವುದು ಶ್ಲಾಘನೀಯ,ಕರ್ನಾಟಕರಾಜ್ಯದಪ್ರಾಥಮಿಕ ಶಾಲೆಗಳಲ್ಲಿ ಸುಮಾರು 1,88,532 ಶಿಕ್ಷಕರಲ್ಲಿ ಹಿರಿಯ ಮುಖ್ಯ ಶಿಕ್ಷಕರು, ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ವಿಶೇಷ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಾ 1 ರಿಂದ 7, 1 ರಿಂದ 8ನೇ ತರಗತಿಗಳನ್ನು ಸಮರ್ಥವಾಗಿ ನಿರ್ವಹಣೆ ಮಾಡುತ್ತಾ ಬಂದಿದ್ದಾರೆ. ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸ್ಸುಗಳಿಗೆ ಅನುಕೂಲವಾಗುವಂತೆ ರಾಜ್ಯದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯ ಪದನಾಮವನ್ನು ಬದಲಾಯಿಸಿ, ಹೊಸ ವೃಂದ ಹಾಗೂ ವೃಂದ ಬಲವನ್ನು ನಿರ್ಧರಿಸುವ ಕುರಿತು ವಿಶೇಷ ರಾಜ್ಯ ಪತ್ರವನ್ನು ಪತ್ರ ಸಂಖ್ಯೆ:434ದಿನಾಂಕ:20-05-2017 ರಂದು ಹೊರಡಿಸಿದ ಪ್ರಾಥಮಿಕ ಶಾಲಾ ಸಹ ಶಿಕ್ಷಕ ವೃಂದವನ್ನು ಮುಖ್ಯವಾಗಿ ಪ್ರಾಥಮಿಕ ಶಾಲಾ ಶಿಕ್ಷಕರು 1 ರಿಂದ 5ಕ್ಕೆ 1,12,467 ಹಾಗೂ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು 6 ರಿಂದ 8ಕ್ಕೆ 51,781 ಎಂದು ವೃಂದವಾರು ಹುದ್ದೆಗಳನ್ನು ಮಂಜೂರಿಸಿ ಆದೇಶಿಸಿದೆ. ಇದರ ಪರಿಣಾಮ 2016ಕ್ಕಿಂತ ಮೊದಲು 1 ರಿಂದ 7, 1 ರಿಂದ 8 ವೃಂದಕ್ಕೆ ನೇಮಕಾತಿಯಾದ ಎಲ್ಲಾ ಸಹ ಶಿಕ್ಷಕರು ಪ್ರಾಥಮಿಕ ಶಾಲಾ ಶಿಕ್ಷಕರು 1 ರಿಂದ 5 ಎಂದು ಪರಿಗಣಿಸಿದ್ದು, ಶಿಕ್ಷಕರಿಗೆ ತೀವ್ರ ಅನ್ಯಾಯವಾಗಿದೆ.2017ರಹೊಸವೃಂದಬಲ ನಿಗದಿಯಾಗುವವರೆಗೆ ಪ್ರಾಥಮಿಕ ಶಾಲಾ ಸಹ ಶಿಕ್ಷಕ ವೃಂದದಿಂದ ಪ್ರೌಢಶಾಲಾ ಸಹ ಶಿಕ್ಷಕ ಗ್ರೇಡ್-2 ವೃಂದಕ್ಕೆ ನಿಯಮಿತವಾಗಿ ಬಡ್ತಿ ನೀಡುವಲ್ಲಿ ಯಾವುದೇ ಸಮಸ್ಯೆಗಳು ಇರಲಿಲ್ಲ. ಪ್ರಾಥಮಿಕ ಶಾಲೆಗಳಲ್ಲಿ 2017ರ ಹೊಸ ವೃಂದಬಲ ನಿಗದಿಯಿಂದಾಗಿ ಪ್ರೌಢಶಾಲಾ ಸಹ ಶಿಕ್ಷಕರು ಗ್ರೇಡ್-2 ವೃಂದಕ್ಕೆ ಬಡ್ತಿ ನೀಡುವಾಗ ಗೊಂದಲಗಳು ಉಂಟಾದುದ್ದನ್ನು ನಮ್ಮ ಸಂಘಟನೆಯು ಬಲವಾಗಿ ತಿಳಿಸುತ್ತಾ ಬಂದಿದ್ದರೂ, ಅದನ್ನು ಪರಿಹರಿಸದೇ, ಮುಂದೂಡುತ್ತಾ ಬರಲಾಗಿದೆ. 1 ರಿಂದ 5 ಪ್ರಾಥಮಿಕ ಶಾಲಾ ಶಿಕ್ಷಕರೆಂದು ಪದನಾಮೀಕರಿಸಿರುವ 2016ಕ್ಕಿಂತ ಮೊದಲು ನೇಮಕವಾದ 1ರಿಂದ 7, 1 ರಿಂದ 8 ವೃಂದದ ಪ್ರಾಥಮಿಕ ಶಾಲಾ ಸಹ ಶಿಕ್ಷಕರಲ್ಲಿ ಸುಮಾರು 80 ಸಾವಿರಕ್ಕೂ ಅಧಿಕ ಶಿಕ್ಷಕರು ಪದವಿಯೊಂದಿಗೆ ಬಿ.ಇಡಿ ವಿದ್ಯಾರ್ಹತೆ ಹೊಂದಿದ್ದರೂ ಇವರನ್ನು 6 ರಿಂದ 8ಕ್ಕೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರೆಂದು ಪರಿಗಣಿಸದೇ ಇರುವುದು ದುರಾದೃಷ್ಟಕರ, ಇದರ ನಡುವೆ 2016ರಿಂದ ಇತ್ತೀಚೆಗೆ 6ರಿಂದ 8 ವೃಂದದ 20110 ಶಿಕ್ಷಕರ ನೇಮಕಾತಿಯಾಗಿದ್ದು, ತತ್ಪರಿಣಾಮದಿಂದಾಗಿ ಅಷ್ಟೇ ಸಂಖ್ಯೆಯ 1 ರಿಂದ 5 ವೃಂದದ ಶಿಕ್ಷಕರ ಹೆಚ್ಚುವರಿ ಸಮಸ್ಯೆ ಸೃಷ್ಟಿಯಾಗಿತ್ತು. ಅದೇ ರೀತಿ ವರ್ಗಾವಣೆ ಪ್ರಕ್ರಿಯೆಯಲ್ಲೂ ಈ ವೃಂದ ಬಲದ ನಿಗದಿ ಸ್ಥಳಗಳ ಆಯ್ಕೆಯಲ್ಲಿ ತೀವ್ರವಾಗಿ ಶಿಕ್ಷಕರಿಗೆ ಸಮಸ್ಯೆ ಸೃಷ್ಟಿಸಿದೆ. ಇದರ ಜೊತೆಯಲ್ಲಿ ವೃಂದಬಲ ನಿಗದಿಯಿಂದ ವೇತನ ಶ್ರೇಣಿ ವ್ಯತ್ಯಾಸವಾಗಿ ಶಿಕ್ಷಕರ ಮನೋಸ್ಥೈರ್ಯದ ಮೇಲೆ ಋಣಾತ್ಮಕ ಪರಿಣಾಮವಾದಾಗ್ಯೂ, ಈಗಿನವರೆಗೂ 1 ರಿಂದ 5 ಶಿಕ್ಷಕ ವೃಂದದವರೆಂದು ಪರಿಗಣಿತವಾದ 1 ರಿಂದ 7, 1 ರಿಂದ 8ಕ್ಕೆ ನೇಮಕಾತಿಯಾದ ಶಿಕ್ಷಕರು ಯಾವುದೇ ಆರ್ಥಿಕ ಸೌಲಭ್ಯ ಬಯಸದೇ, 6 ರಿಂದ 8ನೇ ತರಗತಿ ನಿರ್ವಹಣೆ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದ್ದಾರೆ. ಇದೇ ಸಂದರ್ಭದಲ್ಲಿ 6 ರಿಂದ 8ನೇ ತರಗತಿಗೆ ನೇಮಕವಾದ 20110 ಶಿಕ್ಷಕರು ಕೇವಲ 6 ರಿಂದ 8ನೇ ತರಗತಿ ಬೋಧನೆಮಾತ್ರಮಾಡುತ್ತಿದ್ದು,1ರಿಂದ5ನೇ ತರಗತಿ ಬೋಧನೆಯಲ್ಲಿ ಭಾಗವಹಿಸುತ್ತಿಲ್ಲ. ಆದರೆ 1 ರಿಂದ 7 ಮತ್ತು 1 ರಿಂದ 8ಕ್ಕೆ ನೇಮಕಾತಿಯಾದ ಪ್ರಾಥಮಿಕ ಶಾಲಾ ಸಹ ಶಿಕ್ಷಕರು ಇಲಾಖೆಗೆ ಮುಜುಗರವಾಗದಂತೆ 1 ರಿಂದ 8ನೇ ತರಗತಿವರೆಗಿನ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳನ್ನು ಸಮರ್ಥವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಸಾಮಾಜಿಕ ನ್ಯಾಯದ ಪರ ಧ್ವನಿಯಾಗಿರುವ ತಾವುಗಳು ಲಕ್ಷಾಂತರ ಪ್ರಾಥಮಿಕ ಶಾಲಾ ಶಿಕ್ಷಕರಿಗಾದ ಬಹುದೊಡ್ಡಅನ್ಯಾಯವನ್ನುಗಂಭೀರವಾಗಿ ಪರಿಗಣಿಸಿ,ತುರ್ತಾಗಿ ಒಂದು ಕಾರ್ಯಕಾರಿ ಆದೇಶವನ್ನು ಹೊರಡಿಸಲು ಸರ್ಕಾರವು ಮುಂದಾಗಬೇಕೆಂದು ಮನವಿ ಪತ್ರದಲ್ಲಿ ತಿಳಿಸಿದ್ದಾರಲ್ಲದೇ ಅರ್ಹ ಪ್ರಾಥಮಿಕ ಶಾಲಾ ಶಿಕ್ಷಕರಿಗೆ2016ರಪೂರ್ವದಂತೆಅರ್ಹತೆಯ ಆಧಾರದ ಮೇಲೆ ಪ್ರೌಢ ಶಾಲೆಗೆ ಬಡ್ತಿ ನೀಡಬೇಕು, ಪ್ರಾಥಮಿಕ ಶಾಲಾ ಶಿಕ್ಷಕರಿಗೆ 2016ರ ಪೂರ್ವದಂತೆ ಮುಖ್ಯಗುರುಗಳ ಹಾಗೂ ಹಿರಿಯ ಮುಖ್ಯ ಗುರುಗಳ ಹುದ್ದೆಗೆ ಸೇವಾ ಜೇಷ್ಠತೆಯ ಆಧಾರದ ಮೇಲೆ ಬಡ್ತಿ ನೀಡಬೇಕೆಂದು ಸಲ್ಲಿಸಿದ ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ.

ಮನವಿ ಪತ್ರವನ್ನು ತಹಶಿಲ್ದಾರ ಕಚೇರಿ ಸಿಬ್ಬಂದಿ ಮುನ್ನಾ ಅತ್ತಾರ ಅವರಿಗೆ ಸಂಘದ ಪದಾಧಿಕಾರಿಗಳು ಸಲ್ಲಿಸಿದರು.

ಈ ಸಮಯದಲ್ಲಿ ಸಂಘದ ಅಧ್ಯಕ್ಷ ಬಿ.ಟಿ.ವಜ್ಜಲ,ಉಪಾಧ್ಯಕ್ಷಟಿ.ಎಸ್.ಲಮಾಣಿ, ಕಾರ್ಯದರ್ಶಿ ಎಸ್.ಬಿ.ಬಿರಗೊಂಡ, ಎಂ.ಎಲ್.ಚೌದ್ರಿ,ಶ್ರೀಮತಿಆರ್.ಬಿ.ಆಲೂರ, ಶ್ರೀಮತಿ ಅಂಬಿಕಾ ಗೋಗಿ, ಶ್ರೀಮತಿ ಎ.ಆರ್.ಹಜೇರಿ, ಎ.ಬಿ.ಗೋನಾಳ, ಎಸ್.ಎಸ್.ತೀರ್ಥ, ಸಿ.ಎಸ್.ಯರಗಲ್ಲ, ಶ್ರೀಮತಿ ಎಸ್.ಬಿ.ಹೂಗಾರ, ಜಿ.ಕೆ.ಪತ್ತಾರ, ಎಸ್.ಎಸ್.ಹಿಪ್ಪರಗಿ, ನಿಂಗನಗೌಡ ದೊಡಮನಿ, ಶಿವರಾಜ ಚೌದ್ರಿ, ಎಸ್.ಆರ್.ವಾಲಿಕಾರ, ಎಸ್.ಎಂ.ಪಾಲ್ಕಿ, ಬಿ.ಎ.ವಿಜಾಪೂರ, ಆರ್.ಎ.ವಿಜಾಪೂರ, ಕೆ.ಬಿ.ಬಿರಾದಾರ, ಶ್ರೀಮತಿ ಎಸ್.ವ್ಹಿ.ಬನ್ನೆಟ್ಟಿ, ಶ್ರೀಮತಿ ಜಿ.ಕೆ.ಮಣೂರ, ಶ್ರೀಮತಿ ಎಸ್.ವಾಯ್.ಜಾಲವಾದಿ, ಮೊದಲಾದವರು ಉಪಸ್ಥಿತರಿದ್ದರು.

# ಮಾನವೀಯತೆ ಮೆರೆದ ಚಾಲಕ-ನಿರ್ವಾಹಕ

**ವಿಜಯಪುರ:**ವಿಜಯಪುರದಿಂದ ಮುಳಸಾವಳಗಿಗೆ ಹೊರಡುವ ವಿಜಯಪುರ ಘಟಕ-1ರ ಬಸ್ ಸಂಖ್ಯೆ ಕೆಎ28 ಎಫ್-1703ರಲ್ಲಿ ಪ್ರಯಾಣಿಕರೋರ್ವರು ಮರೆತು ಹೋದ ಲ್ಯಾಪ್‌ಟಾಪ್‌ನ್ನು ಚಾಲಕ ಶೇಖರ ಬೋಗಂ ಹಾಗೂ ನಿರ್ವಾಹಕ ಗುಂಡೂರಾವ ರಾಠೋಡಅವರುಪ್ರಯಾಣಿಕರಿಗೆ ಮರಳಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.



ವಿಜಯಪುರದಿಂದ ಮುಳಸಾವಳಗಿಗೆ ಪ್ರಯಾಣಿಸುತ್ತಿದ್ದ ನೂರಲಿಶಾ ಮಕಾಂದಾರ ಅವರು ಮುಳಸಾವಳಗಿಗೆ ಇಳಿಯುವ ಸಂದರ್ಭದಲ್ಲಿ ತನ್ನ 50 ಸಾವಿರ ಬೆಲೆಬಾಳುವ ಲ್ಯಾಪಟಾಪ್ ಬಸ್ಸಿನಲ್ಲಿಯೇ ಮರೆತು ಬಿಟ್ಟು ಹೋಗಿದ್ದರು. ಬಸ್ಸಿನ ಚಾಲಕ ಹಾಗೂ ನಿರ್ವಾಹಕರು ಲ್ಯಾಪಟಾಪ್‌ನ್ನು ಮೂಲ ಮಾಲೀಕರಿಗೆ ಒಪ್ಪಿಸುವ ಮೂಲಕ ಇತರರಿಗೂ ಮಾದರಿಯಾಗಿದ್ದಾರೆ. ಇವರ ಕಾರ್ಯಕ್ಕೆಲ್ಯಾಪಟಾಪ್ ಮಾಲೀಕ ನೂರಲಿಶಾ ಮಕಾಂದಾರ ಅವರು ಬಹುಮಾನ ನೀಡಲು ಮುಂದೆ ಹೋದಾಗ ನಯವಾಗಿ ತಿರಸ್ಕರಿಸುವ ಮೂಲಕ ಪ್ರಾಮಾಣಿಕತೆ ಮೆರೆದಿದ್ದಾರೆ. ಇವರ ಕಾರ್ಯಕ್ಕೆಸಾರ್ವಜನಿಕರು ಕೊಂಡಾಡಿದ್ದಾರೆ.

# ಮಳೆಯಿಂದ ಜಮೀನುಗಳಲ್ಲಿ ನೀರು: ರೈತರ ಪರದಾಟ



**ಚನ್ನಮ್ಮನ ಕಿತ್ತೂರು :** ತಾಲೂಕಿನ ಕುಲವಳ್ಳಿ ಗ್ರಾಪಂ ವ್ಯಾಪ್ತಿಯ ನಿಂಗಾಪುರ ಗ್ರಾಮ ಹತ್ತಿರದ ಧಾರವಾಡ ಜಿಲ್ಲೆಗೆ ಒಳಪಡುವ ಹುಲಿಕೆರಿ ಕೆರೆ ಅತಿಯಾಗಿ ಸುರಿದ ಮಳೆಯಿಂದ ಜಮೀನು ಮತ್ತು ರಸ್ತೆಗಳ ಮೇಲೆ ಹರಿದು ನೀರು ತುಂಬಿರುತ್ತದೆ. ಇದು ಶಾಲಾ ಮಕ್ಕಳಿಗೆ ಮತ್ತು ರೈತರ ಜಮೀನುಗಳಿಗೆ ಹೋಗಲು ಅಡ್ಡಿಯಾಗಿದ್ದು ಗಾಳಿ ತುಂಬಿದ ಟ್ಯೂಬಿನ ಮೇಲೆ ತೆರಳುವ ಪ್ರಸಂಗ ಎದುರಾಗಿದೆ. ಈ ಕೆರೆ ಅಂ-ದಾಜು 93 ಎಕರೆ ವಿಸ್ತೀರ್ಣ ಹೊಂದಿದ್ದು 1208 ಹೆಕ್ಟರ್ ಜಮೀನಿಗೆ ನೀರಾವರಿ ಒದಗಿಸುತ್ತದೆ.

ನಿಂಗಾಪೂರ ಗ್ರಾಮವು ಕೆರೆಯ ಪಕ್ಕದಲ್ಲಿ ಇರುವುದರಿಂದ ಕೆರೆಯ ನೀರು ಗ್ರಾಮದ ಸುತ್ತಲೂ ವ್ಯಾಪಿಸಿದೆ ಗ್ರಾಮದ ರೈತರ ಜಮೀನುಗಳು ಸಹ ನೀರಿನಲ್ಲಿ ಮುಳುಗಡೆಯಾಗಿವೆ. ಕೃಷಿಯನ್ನು ಅವಲಂಬಿಸಿಕೊಂಡ ಸುಮಾರು 25ಕ್ಕೂ ಅಧಿಕ ರೈತ ಕುಟುಂಬಗಳು ಈ ಗ್ರಾಮದಲ್ಲಿವೆ.

ರೈತರು ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಕೂಲಿ ಕಾರ್ಮಿಕರು ಕೆಲಸಕ್ಕೆ ಹೋಗಲು ಸಂಪರ್ಕ ಸೇತುವೆ ಇಲ್ಲ ಎನ್ನುವುದೇ ಅವರಿಗಿರುವ ಚಿಂತೆ-ಯಾಗಿದೆ.

ಸುದ್ದಿ ತಿಳಿದ ಶಾಸಕ ಬಾಬಾಸಾಹೇಬ್ ಪಾಟೀಲ್ ಸ್ಥಳಕ್ಕೆ ಭೇಟಿ ನೀಡಿ ಸದ್ಯದ ಪರಿಸ್ಥಿತಿಯನ್ನು ಅವಲಂಬಿಸಿ ಬೆಳಗಾವಿಯ ರಾಜ್ಯ ವಿಪತ್ತು ಸ್ಪಂದನಾ ಪಡೆ (ಎಸ್‌ಡಿಆರೆಫ್) ತಂಡದ ಅಧಿಕಾರಿ ಕರೆಯಿಸಿ ಬೋಟ್ ತರಿಸಿ ಅಲ್ಲಿಯ ಶಾಲಾ ಮಕ್ಕಳು ಹಾಗೂ ರೈತರಿಗೆ ಸದ್ಯದ ಮಟ್ಟಿಗೆ ಉಪಯೋಗವಾಗಲು ಸ್ಥಳೀಯರಿಗೆ ತರಬೇತಿ ನೀಡಿ ಮುಂದಿನ ದಿನಮಾನಗಳಲ್ಲಿ ಸೂಕ್ತ ವ್ಯವಸ್ಥೆಯನ್ನು ಮಾಡಲಾಗುವುದು ಎಂದು ತಿಳಿಸಿದರು.

ಈ ವೇಳೆ ತಹಶೀಲ್ದಾರ ರವೀಂದ್ರ ಹಾದಿಮನಿ, ಪಿಡಬ್ಲೂಡಿ ಎಇಇ ಸಂಜು ಮಿರಜಕರ, ಅಶಪಾಕ ಹವಾಲ್ದಾರ, ಸುನೀಲ ಘೀವಾರಿ, ಕೃಷ್ಣಾ ಬಾಳೇಕುಂದ್ರಿ, ಸಂಗನಗೌಡ ಪಾಟೀಲ, ಮುದಕಪ್ಪ ಮರಡಿ, ಚನ್ನಗೌಡ ಪಾಟೀಲ, ಅಪ್ಪಾಶ ಹವಾಲ್ದಾರ, ಮಹಾಂತೇಶ ಎಮ್ಮಿ, ಭೀಷ್ಟಪ್ಪ ಶಿಂಧೆ, ಪಿಡಿಓ ಶ್ರೀಮತಿ ರಾಧಾ, ಗ್ರಾಮ ಲೆಕ್ಕಿಗ, ಇನ್ನೂಳಿದ ಅಧಿಕಾರಿಗಳು ಸೇರಿದಂತೆ ರೈತರು, ಗ್ರಾಮಸ್ಥರಿದ್ದರು.

# ಮುಕುಟ ಸಪ್ತಮಿ ಕಾರ್ಯಕ್ರಮ

**ಚನ್ನಮ್ಮನ ಕಿತ್ತೂರು :** ಸಮೀಪದ ಖಾನಾಪೂರ ತಾಲೂಕಿನ ಕಸಮಳಗಿ (ಕೇಸರಮಳಗಿ) ಗ್ರಾಮದಲ್ಲಿ ಶ್ರೀ 1008 ಪಾರ್ಶ್ವನಾಥ ತೀರ್ಥಂಕರರ ಮೋಕ್ಷ ಕಲ್ಯಾಣ ನಿಮಿತ್ಯ ಮುಕುಟ ಸಪ್ತಮಿ ಕಾರ್ಯಕ್ರಮ ನೇರವೇರಲಿದೆ.

ಕಸಮಳಗಿಯ ಶ್ರೀ 1008 ವರಸಿದ್ಧಿ ಪಾರ್ಶ್ವನಾಥ ದಿಗಂಬರ ಜೈನಮಂದಿರದಲ್ಲಿ ಭವ್ಯ ಮುಕುಟ ಸಪ್ತಮಿ ಮಹೋತ್ಸವವನ್ನು ರವಿವಾರ 11 ಅಗಷ್ಟ 2024 ರಂದು ಆಯೋಜಿಸಲಾಗಿದೆ.

ಬೆಳಿಗ್ಗೆ 6 ಗಂಟೆಗೆ ಮಹಾಭಿಷೇಕ, 9 ಗಂಟೆ-ಗೆ ಸವಾಲ ಧ್ವಜಾರೋಹಣ, 9-30 ರಿಂದ ಪಂಚಾಮೃತ ಅಭಿಷೇಕ, ಸರ್ವದೋಷ ನಿವಾರಣಾ ವಿಧಾನ ಮತ್ತು ನಿರ್ವಾಣ ಲಡ್ಡು ಸಮರ್ಪಣೆ, 108 ಆರ್ಶೀವಾದದ ಹಸ್ತಗಳುಳ್ಳ ಸಕಲ ಅಭಿಷ್ಟ ಫಲದಾಯಿನಿ ಪದ್ಮಾವತಿ ದೇವಿಗೆ ಉಡಿ ತುಂಬುವ ಅಲಂಕಾರ ಕಾರ್ಯಕ್ರಮ ನಂತರ ಶ್ರೀಕ್ಷೇತ್ರ ಪಾಲ ಬ್ರಹ್ಮದೇವರಿಗೆ ಉಡುಗೊರೆ. 108 ಶ್ರೀ ಶಾಂತಿ ಸಾಗರ ಮುನಿ ನಿವಾಸದ ವಾಸ್ತುಶಾಂತಿ ಹಾಗೂ ಕಾರ್ಯಕ್ರಮ. ಭಕ್ತಾದಿಗಳಿಗೆ ಬೆಳಗಿನ ಉಪಹಾರ ಮತ್ತು ಮಹಾಪ್ರಸಾದವಿರುತ್ತದೆ ಎಂದು ಪಾರ್ಶ್ವನಾಥ ದಿಗಂಬರ ಜೈನ ಅಭಿವೃದ್ಧಿ ಕಮೀಟಿಯವರು, ಗ್ರಾಮದ ಹಿರಿಯರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ರಾಜು ಜಕ್ಕನ್ನವರ-9448191108, ಅಭಿನಂದನ ಕೊಚೇರಿ-9448339730, ಅಭಯ ಅವಲಕ್ಕಿ-9845442871, ದೇವೇಂದ್ರ ಗೌಡ್ರ-9944007928 ಅವರನ್ನು ಸಂಪರ್ಕಿಸಲು ಕೋರಲಾಗಿದೆ.

# ಬೆಳಗಾವಿ ಗಣೇಶೋತ್ಸವ ಪೂರ್ವಭಾವಿ ಸಭೆ

## ಶಾಂತಿ, ಸೌಹಾರ್ದತೆಯ ಹಬ್ಬ ಆಚರಣೆಗೆ ಎಲ್ಲರೂ ಸಹಕರಿಸಬೇಕು: ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್

**ಬೆಳಗಾವಿ :** ಗಣೇಶ ಹಬ್ಬ ಅದ್ದೂರಿ ಆಚರಣೆಯಲ್ಲಿ ಬೆಳಗಾವಿ ಜಿಲ್ಲೆ ಮುಂಚೂಣಿಯಲ್ಲಿದೆ. ಪ್ರತಿವರ್ಷದಂತೆ ಗಣೇಶ ಹಬ್ಬನ್ನು ಅದ್ದೂರಿಯಾಗಿ ಆಚರಿಸೋಣ. ಈ ನಿಟ್ಟಿನಲ್ಲಿ ಶಾಂತಿ, ಸೌಹಾರ್ದತೆಯ ಗಣೇಶ ಹಬ್ಬ ಆಚರಣೆಗೆ ಪ್ರತಿಯೊಬ್ಬರೂ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ತಿಳಿಸಿದರು.



ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ಮಂಗಳವಾರ (ಆ.07) ನಡೆದ ಗಣೇಶ ಉತ್ಸವದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗಣೇಶ ಹಬ್ಬದ ಆಚರಣೆಯ ನೆಪದಲ್ಲಿ ಕಾನೂನುಬಾಹಿರ ಚಟುವಟಿಕೆಗಳು ನಡೆ-ಯದಂತೆ ಮುನ್ನೆಚ್ಚರಿಕೆ ವಹಿಸಬೇಕು. ಪರಿಸರ ಹಾಳಾಗದಂತೆ ಮಣ್ಣಿನ ಮೂರ್ತಿಯ ಗಣಪತಿಗಳನ್ನು ಸ್ಥಾಪಿಸುವುದು ಅವಶ್ಯ, ಮೂರ್ತಿ ಸ್ಥಾಪನೆಯ ಮುನ್ನ ಪ್ರತಿವರ್ಷದಂತೆ ಸಂಬಂಧಿಸಿದ ಇಲಾಖೆಯ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ ಎಂದು ತಿಳಿಸಿದರು.

ಗಣೇಶ ಮಂಟಪದಲ್ಲಿ ಪ್ರವೇಶ ದ್ವಾರ ಹಾಗೂ ನಿರ್ಗಮಿಸುವ ದ್ವಾರವನ್ನು ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು. ನಗರದ ಎಲ್ಲಾ ಗಣೇಶ ಮೂರ್ತಿ ವಿಸರ್ಜನೆ ಹೊಂಡಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ. ಸಾರ್ವಜನಿಕರಿಗೆ ಮಹಾನಗರ ಪಾಲಿಕೆಯಿಂದ ನೀರಿನ ವ್ಯವಸ್ಥೆ ಕೂಡ ಮಾಡಲಾಗುವುದು ಎಂದರು.

**ಪೂರ್ವಾನುಮತಿ ಕಡ್ಡಾಯ:**

ಗಣೇಶ ಪ್ರತಿಷ್ಠಾನಕ್ಕಾಗಿ ನಗರದ ಎಂಟು ಪೊಲೀಸ್ ಠಾಣೆಗಳಲ್ಲಿ ಏಕಗವಾಕ್ಷಿ ಪದ್ಧತಿಯಲ್ಲಿಅನುಮತಿಗಾಗಿವ್ಯವಸ್ಥೆಯನ್ನು ಜಾರಿಗೊಳಿಸಲಾಗಿರುತ್ತದೆ. ವಿದ್ಯುತ್ ಸಂಪರ್ಕಕ್ಕೆ ಹೆಸ್ಕಾಂ ಕಚೇರಿಗಳಿಂದ ಸೂಕ್ತ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಗಣೇಶ ವೀಕ್ಷಣೆಗೆ ಬರುವ ಮಹಿಳೆ ಹಾಗೂ ಪುರುಷರಿಗೆ ಪ್ರತ್ಯೇಕ ಮಾರ್ಗ ಕಲ್ಪಿಸಬೇಕು. ಮೂರ್ತಿ ವಿಸರ್ಜನೆ ಮಾಡುವ ದಿನ, ಸಮಯದ ಕುರಿತು ಮಾಹಿತಿ ನೀಡಬೇಕು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

ಇದೇ ಸಂದರ್ಭದಲ್ಲಿ ಗಣೇಶ ಮಹಾ ಮಂಡಳಿ ಪದಾಧಿಕಾರಿಗಳು ಮಾತನಾಡಿ, ಜಿಲ್ಲಾಡಳಿತ ನಿರ್ದೇಶದಂತೆ ಸರ್ಕಾರದ ಮಾರ್ಗಸೂಚಿ ಅನ್ವಯ ಪ್ರತಿ ವರ್ಷ ಜಿಲ್ಲೆಯಲ್ಲಿ ಗಣೇಶ ಉತ್ಸವ ಆಚರಣೆ ಮಾಡಲಾಗುತ್ತಿದೆ. ಕಳೆದ ಎರಡು ಮೂರು ವರ್ಷಗಳಿಂದ ವಿದ್ಯುತ್ ಸಮಸ್ಯೆಯಾಗಿದೆ ಆದ್ದರಿಂದ ಹೆಸ್ಕಾಂ ಹಾಗೂ ಪೊಲೀಸ್ ಇಲಾಖೆ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಗಣೇಶಮೂರ್ತಿಗಳಮೆರವಣಿಗೆಮಾಡುವ ಸಂದರ್ಭದಲ್ಲಿ ತೊಂದರೆಯಾಗುವ ಸಾಧ್ಯತೆ ಇರುವುದರಿಂದ ರಸ್ತೆಯಲ್ಲಿ ಬಂದಿರುವ ಗಿಡ ಮರಗಳ ಕೊಂಬೆಗಳನ್ನು ಕಟಾವು ಮಾಡಲು ಹಾಗೂ ವಿವಿಧ ದೂರ ಸಂಪರ್ಕ ಕೇಬಲ್ ಗಳ ತೆರೆವಿಗೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

**ಹೆಚ್ಚಿನ ಬಸ್ ಕಾರ್ಯಾಚರಣೆ:**

ಗಣೇಶ ಮೂರ್ತಿ ಪ್ರತಿಷ್ಠಾಪನೆಯ 5 ದಿನಗಳ ನಂತರ ಸಾರ್ವಜನಿಕರು ಹೆಚ್ಚು ಭಾಗವಹಿಸುವ ಸಾಧ್ಯತೆ ಹೆಚ್ಚಾಗಿದೆ. ಆದ್ದರಿಂದ ಗ್ರಾಮೀಣ ಭಾಗದ ಜನರಿಗೆ ಅನುಕೂಲಗುವ ನಿಟ್ಟಿನಲ್ಲಿ ಕೆ.ಎಸ್.ಆರ್.ಟಿ.ಸಿ ಯಿಂದ ಹೆಚ್ಚಿನ ಬಸ್ ಗಳ ಕಾರ್ಯಾಚರಣೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡರು.

ಗಣೇಶ ಉತ್ಸವದ ಸಂಪೂರ್ಣ ಜವಾಬ್ದಾರಿಯನ್ನು ಸಂಬಂಧಿಸಿದ ಇಲಾಖೆಗಳು ವಹಿಸಿಕೊಳ್ಳಬೇಕು. ಎಲ್ಲ ಇಲಾಖೆಯ ಅಧಿಕಾರಿಗಳ ದೂರುಗಳಿಗೆ ತಕ್ಷಣ ಸ್ಪಂದಿಸಬೇಕು. ಮಹಾಮಂಡಳಿಗಳ ಸಮನ್ವಯದೊಂದಿಗೆ ಎಲ್ಲ ಇಲಾಖೆಯ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಸೂಚನೆ ನೀಡಿದರು.

ಪೊಲೀಸ್ ಆಯುಕ್ತ ಯಡಾ ಮಾರ್ಟಿನ ಮಾರ್ಬನ್ಯಾಂಗ್ ಮಾತನಾಡಿ, ಗಣೇಶ ಮೂರ್ತಿಗಳು ಹೆಚ್ಚು ಎತ್ತರವಾಗಿರದಂತೆ ನೋಡಿಕೊಳ್ಳಬೇಕು. ಇದರಿಂದ ಸಂಭವನೀಯ ಅನಾಹುತಗಳನ್ನು ತಡೆಗಟ್ಟಬಹುದಾಗಿದೆ. ಡಿ.ಜೆ ಅಳವಡಿಕೆಯಲ್ಲಿ ಮಾರ್ಗಸೂಚಿಗಳನ್ನು ಉಲ್ಲಂಘಿಸುವರ ಮೇಲೆ ಕ್ರಮ ಜರುಗಿಸಲಾಗುವದು ಎಂದು ಎಚ್ಚರಿಕೆ ನೀಡಿದರು.

ಗಣೇಶ ಮಹಾಮಂಡಳಿಗಳು ಸ್ವಯಂ ಸೇವಕರನ್ನು ನೇಮಿಸುವುದರ ಜೊತೆಗೆ ಗಣೇಶವಿಸರ್ಜನೆಪ್ರಾರಂಭದಿಂದಕೊನೆಯ ವರೆಗೆ ಕಡ್ಡಾಯವಾಗಿ ಹಾಜರಿರಬೇಕು ಇದರ ಜೊತೆಗೆ ಮಂಡಳಿಗಳ ಮುಖ್ಯಸ್ಥರು ಪೋಲಿಸ್ ಸಿಬ್ಬಂದಿಗಳೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು. ಗಣೇಶ ಉತ್ಸವದ ಸಂದರ್ಭದಲ್ಲಿ ಯಾವುದೇ ಗಲಭೆ ಅಥವಾ ಸಾಮಾಜಿಕ ಸ್ವಾಸ್ಥ್ಯ ಹಾಳು ಮಾಡುವವರು ಕಂಡು ಬಂದಲ್ಲಿ ಅಂತಹವರ ವಿರುದ್ಧ ಯಾವುದೇ ಮುಲಾಜಿಲ್ಲದೇ ಕ್ರಮ ಜರುಗಿಸಲಾಗುವುದು ಎಂದರು.

**ಅಪಾಯಕಾರಿ ಬ್ಯಾನರ್ ಅಳವಡಿಕೆ ನಿಷೇಧ:**

ಡಿಸಿಪಿ ರೋಹನ್ ಜಗದೀಶ್ ಮಾತನಾಡಿ ಅತೀದೊಡ್ಡಬ್ಯಾನರ್‌ಗಳನ್ನುಅಳವಡಿಸಿದ್ದಲ್ಲಿ ಎಲೆಕ್ಟಿಕ್ ವೈರ್ ತಗುಲಿ ಅಪಾಯ ಎದುರಾಗುವ ಸಂಭವವಿರುತ್ತದೆ. ಬ್ಯಾನರ್ ಅಳವಡಿಕೆಯಿಂದ ಸಾರ್ವಜನಿಕರಿಗೆ ತೊಂದರೆ ಆಗಬಾರದು. ಹಸಿರು ಪಟಾಕಿ ಮಾತ್ರ ಖರೀದಿ ಮಾಡಬೇಕು. ಒಂದು ವೇಳೆ ಅನಧಿಕೃತ ಪಟಾಕಿಗಳನ್ನು ಖರೀದಿ ಅಥವಾ ಮಾರಾಟ ಮಾಡುವದು ಕಂಡುಬಂದಲ್ಲಿ ಅಂತವರ ವಿರುದ್ಧ ಕಾಯ್ದೆಯಡಿ ಕ್ರಮ ಜರುಗಿಲಾಗುವುದು ಎಂದು ತಿಳಿಸಿದರು.

ಈ ವೇಳೆ ಮಾತನಾಡಿದ ವಿವಿಧ ಗಣೇಶ ಉತ್ಸವ ಮಹಾ ಮಂಡಳಿಯ ಅಧ್ಯಕ್ಷರು, ಪದಾಧಿಕಾರಿಗಳು, ನಗರದಲ್ಲಿ ಈಗಾಗಲೇ ಸುಮಾರು ವರ್ಷಗಳಿಂದ ಗಣೇಶ ಉತ್ಸವ ಪಾರಂಪರಿಕವಾಗಿ ಅದ್ದೂರಿಯಾಗಿ ಆಚರಿಸುತ್ತಾ ಬಂದಿದೆ. ದೇಶದಲ್ಲೇ ಎರಡನೇ ಅತಿ ದೊಡ್ಡ ಗಣೇಶ ಉತ್ಸವ ಆಚರಣೆ ನಮ್ಮ ಜಿಲ್ಲೆಯಲ್ಲಿ ನಡೆ-ಯುತ್ತದೆ. ಗಣೇಶ ಮೂರ್ತಿ ವಿಸರ್ಜನೆಯ ಸುಮಾರು 8 ಹೊಂಡಗಳಿವೆ ಎಲ್ಲವನ್ನೂ ಸ್ವಚ್ಛಗೊಳಿಸಬೇಕು. ಗಣೇಶ ಮಂಟಪಗಳಿಗೆ ಸೂಕ್ತ ಪೊಲೀಸ್ ಭದ್ರತೆ ನೀಡಬೇಕು ಎಂದು ಮನವಿ ಮಾಡಿಕೊಂಡರು.

ಗಣೇಶ ಮೂರ್ತಿ ವೀಕ್ಷಿಸಲು ಬರುವ ಸಾರ್ವಜನಿಕರಲ್ಲಿ ಮಹಿಳೆಯರು ಹಾಗೂ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾ-ರೆ ಹಾಗಾಗಿ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು. ಮೈಸೂರು ದಸರಾ ಉತ್ಸವ ಮಾದರಿಯಲ್ಲಿ ಬೆಳಗಾವಿಯಲ್ಲಿ ಗಣೇಶ ಉತ್ಸವ ಆಚರಣೆಯಾಗಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಭೀಮಾಶಂಕರಗುಳೇದಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರುತಿ, ಎಸಿಪಿ ಸದಾಶಿವ ಕಟ್ಟಿಮನಿ, ಮಹಾನಗರ ಪಾಲಿಕೆ ಆಯುಕ್ತ ಅಶೋಕ ದುಡಗುಂಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಮಹಾನಗರ ಪಾಲಿಕೆ ನಗರ ಸೇವಕರು, ವಿವಿಧ ಗಣೇಶ ಮಹಾಮಂಡಳಿಗಳ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

# 64 ವಾತ್ಸಾಯನ ವಿದ್ಯೆಗಳಲ್ಲಿ ಸಂಗೀತಕ್ಕೆ ವಿಶೇಷ ಸ್ಥಾನಮಾನವಿದೆ: ಕ.ವಿ.ವಿ. ಇಂಗ್ಲೀಷ ಪ್ರಾಧ್ಯಾಪಕ ಡಾ.ಮಲ್ಲಿಕಾರ್ಜುನ ಪಾಟೀಲ

**ಧಾರವಾಡ:** ಸಂಗೀತದ ಭಾಷೆ ವಿಶ್ವದ ಭಾಷೆ. 64 ವಾತ್ಸಾಯನ ವಿದ್ಯೆಗಳಲ್ಲಿ ಸಂಗೀತ-ಕ್ಕೆ ವಿಶೇಷ ಸ್ಥಾನಮಾನವಿದೆ. ಈ ಸಂಗೀತ ಕಲೆಗೆ ಜೀವನ ಸಾಕ್ಷಾತ್ಕಾರಕ್ಕೆ ಸ್ಫೂರ್ತಿ ನೀಡುವಂತಹ ಶಕ್ತಿ ಇದೆ ಎಂದು ಕ.ವಿ.ವಿ. ಇಂಗ್ಲೀಷ ಪ್ರಾಧ್ಯಾಪಕ ಡಾ.ಮಲ್ಲಿಕಾರ್ಜುನ ಪಾಟೀಲ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಡಾ ನಂದಾ ಪಾಟೀಲ ದತ್ತಿ ಅಂಗವಾಗಿ ಆಯೋಜಿಸಿದ್ದ 'ಡಾ ನಂದಾ ಪಾಟೀಲ ವಚನ ಸಂಗೀತ ಪುರಸ್ಕಾರ-2024 ಪ್ರದಾನ ಸಮಾರಂಭ ಹಾಗೂ ಸಂಗೀತ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡುತ್ತಿದ್ದರು.



ಮುಂದುವರೆದು ಮಾತನಾಡಿದ ಅವರು, ಎಲ್ಲ ವಚನಗಳನ್ನು ಸಂಗೀತ-ಕ್ಕೆ ಅಳವಡಿಸಿ ಹಾಡುವ ಮೂಲಕ ಶರಣರತತ್ವ ಸಿದ್ಧಾಂತಗಳನ್ನು ಜಗತ್ತಿಗೆ ಸರಳವಾಗಿ ಅರ್ಥೈಸಿಕೊಡಲು ಸಾಧ್ಯವಿದೆ. ಈ ಕುರಿತಂತೆ ವಚನಗಳನ್ನು ಸಂಗೀತ-ಕ್ಕೆ ಅಳವಡಿಸಿದರೆ ಶರಣ ಸಂಸ್ಕೃತಿ ಹೆಚ್ಚು ಬೆಳೆಯುತ್ತದೆ, ಬಸವಾಭಿಮಾನಿಗಳು ಹೆಚ್ಚು ಆಸ್ಥೆ ವಹಿಸಬೇಕು. ಇಂದು ಯುವಜನಾಂಗ ಸಂಗೀತಕ್ಷೇತ್ರದಲ್ಲಿ ಹೆಚ್ಚು ಸಾಧನೆಗೈಯುತ್ತಿದ್ದಾರೆ. ಅಂಥ ಯುವ ಪ್ರತಿಭೆಗಳಿಗೆ ನಿರಂತರ ಪ್ರೋತ್ಸಾಹ ಅಗತ್ಯವಿದೆ. ಇಂಥ ಪ್ರೋತ್ಸಾಹವನ್ನು ಡಾ.ನಂದಾ ಪಾಟೀಲ ದತ್ತಿ ಕಾರ್ಯಕ್ರಮದ ಮೂಲಕ ಈಡೇರಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ ಎಂದರು.

ದತ್ತಿ ಅಂಗವಾಗಿ ಡಾ. ನಂದಾ ಪಾಟೀಲ ವಚನ ಸಂಗೀತ ಪುರಸ್ಕಾರ-2024 ಪುರಸ್ಕಾರವನ್ನುಸಂಗೀತಗಾರ್ತಿಡಾ.ವೀಣಾ ಸವದತ್ತಿ ಅವರಿಗೆ ಪ್ರದಾನ ಮಾಡಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಈ ಪ್ರಶಸ್ತಿಯು ನನ್ನನ್ನು ಇನ್ನಷ್ಟು ಹಿಂದೂಸ್ತಾನಿ ಸಂಗೀತದಲ್ಲಿ ಸಾಧನೆ ಮಾಡಲು ಪ್ರೇರೆಪಣೆ ನೀಡಿದೆ ಎಂದರು.

ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿ ಮಾತನಾಡಿ, ಡಾ.ನಂದಾ ಪಾಟೀಲರ ಸಂಗೀತದ ಸಾಧನೆ ಯುವ ಪೀಳಿಗೆಗೆ ಮಾದರಿಯಾಗಿದೆ. ಹಿಂದೂಸ್ತಾನಿ ಸಂಗೀತಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿರುವ ಡಾ.ನಂದಾ ಪಾಟೀಲ ಅವರ ಹೆಸರಿನಲ್ಲಿಯುವ ಸಂಗೀತಗಾರರಿಗೆ ಪ್ರಶಸ್ತಿ ನೀಡುವ ಪರಂಪರೆ ಹಮ್ಮಿಕೊಂಡಿರುವುದು ಅತೀವ ಸಂತೋಷವಾಗಿದೆ ಎಂದರು.

ಪ್ರಶಸ್ತಿ ಪುರಸ್ಕೃತೆ ಡಾ.ವೀಣಾ ಸವದತ್ತಿ ಸಂಗೀತ ಸಭೆಯನ್ನು ನಡೆಸಿಕೊಟ್ಟರು. ಹಾರ್ಮೋನಿಯಂ ಪರಶುರಾಮ ಕಟ್ಟಿ ಸಂಗಾವಿ, ವಿಜಯ ಸುತಾರ ತಬಲಾ ಸಾಥ್ ನೀಡಿದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದಡಾ. ವೀರಣ್ಣಒಡ್ಡೀನ ಸ್ವಾಗತಿಸಿದರು.ಡಾ. ಧನವಂತ ಹಾಜವಗೋಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಗುರು ಹಿರೇಮಠ ನಿರೂಪಿಸಿ ವಂದಿಸಿದರು.

ಕಾರ್ಯಕ್ರಮದಲ್ಲಿಡಾ.ಅರವಿಂದಯಾಳಗಿ, ಸಿ.ಎಸ್. ಪಾಟೀಲ, ಎಸ್.ಜಿ. ಪಾಟೀಲ, ಬಸವರಾಜ ಬೆಂಗೇರಿ, ಮಹಾಂತೇಶ ನರೇಗಲ್ಲ, ಎಂ. ಬಿ. ಹೆಗ್ಗೇರಿ ಹಾಗೂ ಡಾ. ನಂದಾ ಪಾಟೀಲರ ಶಿಷ್ಯಬಳಗ, ಅಭಿಮಾನಿಗಳು ಹಾಗೂ ಅವರ ಪರಿವಾರ ಸೇರಿದಂತೆಅನೇಕರು ಭಾಗವಹಿಸಿದ್ದರು.

# ಅಂಗಾಂಗದಾನ ಅರಿವು ಕಾರ್ಯಕ್ರಮ




**ಧಾರವಾಡ :** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಸರಕಾರಿ ಪದವಿಪೂರ್ವ ಕಾಲೇಜ ಆರ್.ಎನ್.ಶೆಟ್ಟಿ ಕ್ರೀಡಾಂಗಣದ ಆವರಣದಲ್ಲಿ ಅಂಗಾಂಗದಾನದ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ಎಮ್.ಎನ್ ಅಗಡಿ ಇವರು ಮಾತನಾಡಿ ಒಬ್ಬ ದಾನಿಯು ಕಿಡ್ನಿ, ಲಿವರ್, ಹೃದಯ ಶ್ವಾಸಕೋಶ, ಮೆದೋಜಿರಕ ಗ್ರಂಥಿ, ಸಣ್ಣ ಕರಳು ಸೇರಿದಂತೆ ದೇಹದ ಹಲವು ಅಂಗಾಂಗಗಳನ್ನು ದಾನ ಮಾಡುವುದರ ಮೂಲಕ ಅನೇಕ ಜೀವಗಳನ್ನು ಉಳಿಸಬಹುದು. ಯಾವುದೇ ವಯಸ್ಸು ಅಥವಾ ಲಿಂಗಬೇದವಿಲ್ಲದೆ ಅಂಗಾಂಗ ಮತ್ತು ಅಂಗಾಂಶ ದಾನ ಮಾಡಬಹುದು. ಒಬ್ಬ ವ್ಯಕ್ತಿ ಅಂಗಾಂಗ ದಾನ ಮಾಡುವುದರಿಂದ 08 ಜನರ ಜೀವ ಉಳಿಸಬಹುದು. ಅಂಗಾಂಗ ದಾನ ಮಾಡಿ ಜೀವ ಉಳಿಸಿ ಎಂದು ಅವರು ಹೇಳಿದರು.

ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ಕೆ.ಕೆ. ಚವ್ಹಾಣ ಅವರು ಮಾತನಾಡಿ, ಅಂಗಾಂಗದಾನ ಮಾಡಲು ಹೇಗೆ ರೆಜಿಸ್ಟ್ರೇಷನ್ ಮಾಡಿಕೊಳ್ಳಬೇಕು ಎಂಬುದನ್ನು ತಿಳಿಸಿದರು. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳಾದ ರೇಖಾ ಬಾಡಗಿ ಇವರು ಡೆ-ಂಗ್ಯೂ ಮತ್ತು ಚಿಕುನಗುನ್ಯಾ ರೋಗಗಳು ಹರಡುವ ಬಗೆ, ರೋಗದ ಲಕ್ಷಣಗಳು ಹಾಗೂ ತಡೆಗಟ್ಟುವ ವಿಧಾನಗಳ ಬಗ್ಗೆ ಅವರು ತಿಳಿಸಿದರು.

ಉಪನ್ಯಾಸಕರಾದ ಡಾ. ಮಂಜುಳಾ ಎನ್. ಸವಡಿ ಇವರು ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪನ್ಯಾಸಕರಾದ ಡಾ. ಶೇಖರ ಸಜ್ಜನ್ ಸ್ವಾಗತಿಸಿದರು. ಉಪನ್ಯಾಸಕರಾದ ಬಿ.ಎಸ್. ಬಣಕಾರ ಅವರು ವಂದಿಸಿದರು.

ಕಾರ್ಯಕ್ರಮದಲ್ಲಿ ಸರಕಾರಿ ಪದವಿಪೂರ್ವ ಕಾಲೇಜನ ಉಪನ್ಯಾಸಕ ರಾಜಕುಮಾರ ಭಜಂತ್ರಿ, ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಸೇರಿದಂತೆ ಸರಕಾರಿ ಪದವಿಪೂರ್ವ ಕಾಲೇಜನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ನೂತನ ಅವಧಿಗೆ ಆಡಳಿತ ಮಂಡಳಿ ಸದಸ್ಯರ ಆಯ್ಕೆ



**ಧಾರವಾಡ :** ಜಿಲ್ಲಾ ತೋಟಗಾರಿಕೆ ಬೆಳೆಗಾರರ ಉತ್ಪನ್ನ ಮಾರಾಟ ಮತ್ತು ಸಂಸ್ಕರಣ ಸಹಕಾರಿ ಸಂಘ ನಿಯಮಿತ, ಧಾರವಾಡ ಇದರ ಮುಂದಿನ 5 ವರ್ಷಗಳ ಅವಧಿಗಾಗಿ ಆಗಸ್ಟ್ 5 ರಂದು ನಡೆದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಚುನಾವಣೆಯಲ್ಲಿ ಸಿದ್ದಪ್ಪ ವೆಂಕಪ್ಪ ಪ್ಯಾಟಿ, ಅಧ್ಯಕ್ಷ ಹಾಗೂ ಅರ್ಜುನ ದೊಡ್ಡಬಸಪ್ಪ ಪತ್ರಣ್ಣವರ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿರ್ದೇಶಕ ಮಂಜುನಾಥ ಅಜ್ಜಪ್ಪ ಹೊರಕೇರಿ, ಉಳವಪ್ಪ ತಿಪ್ಪಣ್ಣ ದಾಸನೂರ, ಶಿವಾನಂದ ಶೇಖರಪ್ಪ. ಮುದ್ದಿ, ಚನ್ನಬಸಪ್ಪ ನಿಂಗಪ್ಪ ಸಾಲಿ, ನಿಂಗಪ್ಪ ಪರಶುರಾಮ ಬೇಕವಾಡಕರ, ಉಮೇಶ ಶಿದ್ಲಿಂಗಪ್ಪ ಭೂಮಣ್ಣವರ, ಕವಿತಾ ಹನುಮಂತರಾವ ಘೋರ್ಪಡೆ, ಶಾಂತಾ ಮಾರುತಿ ಬೇಕವಾಡಕರ, ಬಸವರಾಜ ಮಲ್ಲಪ್ಪ ಮೊರಬ ಹಾಗೂ ಹಸನಪ್ಪ ಕರೆಪ್ಪ ತಳವಾರ ಇವರುಗಳು ಬಹುಮತದಿಂದ ಆಯ್ಕೆಯಾಗಿದ್ದಾರೆಂದು ಜಿಲ್ಲಾ ತೋಟಗಾರಿಕೆ ಬೆಳೆಗಾರರ ಉತ್ಪನ್ನ ಮಾರಾಟ ಮತ್ತು ಸಂಸ್ಕರಣ ಸಹಕಾರಿ ಸಂಘ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿ.ಎಂ. ರಾಜೀನಾಮೆಗೆ ಆಗ್ರಹ



**ನವಲಗುಂದ :** ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇದರ ನೈತಿಕತೆ ಹೊತ್ತು ಸಿಎಂ ಸ್ಥಾನಕ್ಕೆ ಸಿದ್ಧರಾಮಯ್ಯ ಅವರು ರಾಜೀನಾಮೆ ನೀಡಬೇಕೆಂದು ಮಾಜಿ ಸಚಿವ ಶಂಕರ ಪಾಟೀಲಮುನೇನಕೊಪ್ಪ ಆಗ್ರಹಿಸಿದರು.

ಸರಕಾರದ ವಿರುದ್ಧ ಬಿಜೆಪಿ ಹಮ್ಮಿಕೊಂಡಿರುವ ಬೆಂಗಳೂರು ಮೈಸೂರು ಬೃಹತ್ ಪಾದಯಾತ್ರೆಯಲ್ಲಿ ಸೋಮವಾರ ಮಂಡ್ಯದಲ್ಲಿ ರಾಜ್ಯಾಧ್ಯಕ್ಷ ವಿಜಯೇಂದ್ರ ಜೊತೆ ಕ್ಷೇತ್ರದ ನೂರಾರೂ ಕಾರ್ಯಕರ್ತರೊಂದಿಗೆ ಹೆಜ್ಜೆ ಹಾಕಿ ಮಾತನಾಡಿದ ಅವರು ರಾಜ್ಯದಲ್ಲಿ ಭ್ರಷ್ಟ ವ್ಯವಸ್ಥೆ ದಿನೇ ದಿನೇ ಹೆಚ್ಚಾಗಿದೆ. ಸಾಮಾನ್ಯ ಜನರ ದಿಕ್ಕು ತಪ್ಪಿಸಿ ಹಣವನ್ನ ಕೊಳ್ಳೆ ಹೊಡೆಯಲಾಗುತ್ತಿದೆ. ಅಧಿಕಾರ ಸಿಕ್ಕ ತಕ್ಷಣವೇ ಲೂಟಿಗೆ ಇಳಿದಿರುವುದು ನಾಡಿನ ಜನತೆಗೆ ಗೊತ್ತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ತಾಲೂಕು ಅಧ್ಯಕ್ಷ ಶರಣಪ್ಪಗೌಡ ದಾನಪ್ಪಗೌಡರ, ಜಿಪಂ ಮಾಜಿ ಅಧ್ಯಕ್ಷ ಅಡಿವೆಪ್ಪ ಮನಮಿ, ಸಿದ್ದಣ್ಣ ಕಿಟಗೇರಿ, ರಾಜಶೇಖರ ಕಂಪ್ಲಿ, ರೋಹಿತ ಮತ್ತಿಹಳ್ಳಿ, ಶಂಕರ ಯಾದವಾಡ, ಮುತ್ತು ಗಾಳಪ್ಪನವರ, ಫಕ್ಕೀರಪ್ಪ ಚಾಕಲಬ್ಬಿ, ಮುತ್ತು ಕೊಳ್ಳಿ, ಪ್ರಭು ಬುಳಗಣ್ಣನವರ, ಸೋಮು ಪಟ್ಟಣಶೆಟ್ಟಿ, ಪ್ರವೀಣ ಮಾಯಿನಕಾಯಿ ಸೇರಿದಂತೆ ನಗರ ಹಾಗೂ ಗ್ರಾಮೀಣ ಮಟ್ಟದ ಪದಾಧಿಕಾರಿಗಳು ಸದಸ್ಯರು ಕಾರ್ಯಕರ್ತರು ಭಾಗವಹಿಸಿದ್ದರು.

# ನವಲಗುಂದ: ಜಿಲ್ಲಾ ಮಟ್ಟಕ್ಕೆ ಆಯ್ಕೆ



**ನವಲಗುಂದ :** ಇಲ್ಲಿಯ ಸ್ಥಳೀಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ, ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯ ನವಲಗುಂದ ರವರು ನಡೆಸುವ ತಾಲೂಕ ಮಟ್ಟದ ಚೆಸ್ ಸ್ಪರ್ಧೆಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 7 ಜನ ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ಬಾಲಕರ ವಿಭಾಗದಲ್ಲಿ ಕುಮಾರ್ ಶ್ರೇಯಸ ನವಲಗುಂದ, ಶಿವರಾಜ ತಿಪ್ಪನ್ನವರ , ದೇವರಾಜ ತರ್ಲಘಟ್ಟ, ಬಾಲಕಿಯರ ವಿಭಾಗದಲ್ಲಿ ಕುಮಾರಿ ಸುನಿತಾ ಖ್ಯಾಡದ , ಭಾವನಾ ಮೆಣಸಿನಕಾಯಿ, ಸೃಷ್ಟಿ ಅಕ್ಕಿ, ಸಿಮ್ರನ್ ಸುಂಕದ ಕ್ರೀಡಾಪಟುಗಳು ಪ್ರಶಸ್ತಿ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾ-ರೆ. ಸ್ಪರ್ಧೆಯಲ್ಲಿ ಒಟ್ಟು 108 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಈ ವಿದ್ಯಾರ್ಥಿಗಳಿಗೆ ಪ್ರಾಂಶುಪಾಲರಾದ ರಮೇಶ್ ಕಬ್ಬೇರಳ್ಳಿ ಹಾಗೂ ದೈಹಿಕ ಶಿಕ್ಷಕರಾದ ಮಹೇಶ ಅಣ್ಣಿಗೇರಿ ಮತ್ತು ವಸತಿ ಶಾಲೆಯ ಸರ್ವ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿ ಅಭಿನಂದನೆಗಳನ್ನು ಸಲ್ಲಿಸುತ್ತಾರೆ.

# ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ

## ಜನ ಸಾಮಾನ್ಯರಿಗೆ ಸ್ವಚ್ಛತೆಯ ಅರಿವು ಮೂಡಿಸಿ: ಸಿಪಿಐ ಸುರೇಶ್

**ಕೊಪ್ಪಳ :** ಗ್ರಾಮೀಣ ಭಾಗದ ಜನ ಸಾಮಾನ್ಯರಿಗೆ ಸ್ವಚ್ಛತೆಯ ಕುರಿತು ಅರಿವು ಮೂಡಿಸುವಂತೆ ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಯ ಸಿಪಿಐ ಸುರೇಶ ಡಿ ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು.



ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ವತಿಯಿಂದ ಕೊಪ್ಪಳ ತಾಲೂಕಿನ ಓಜನಹಳ್ಳಿ ಗ್ರಾಮದ ಮಾರುತೇಶ ದೇವಾಲಯದ ಆವರಣದಲ್ಲಿ ಆಗಸ್ಟ್ 06ರಂದು ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

'ಪ್ರಿವೆನ್ಶನ್ ಈಜ್ ಬೆಟರ್ ದೆನ್ ಕ್ಯುರ್' ಎನ್ನುವ ಆರೋಗ್ಯ ಕುರಿತಾದ ಮಾತು ಸದಾ ಪ್ರಚಲಿತ. ಆರೋಗ್ಯವಿದ್ದರೆ ಎಲ್ಲವೂ ಸಾಧ್ಯ. ಅದಕ್ಕಾಗಿ 'ಆರೋಗ್ಯವೇ ಭಾಗ್ಯ' ಎನ್ನುವುದು ಸ್ಪಷ್ಟವಾಗಿದೆ. ಆರೋಗ್ಯ ಎಂದರೆ ನಮ್ಮ ಮನೆ ಅಷ್ಟೆ ಅಲ್ಲ; ನಮ್ಮ ಸುತ್ತ ಮುತ್ತಲಿನ ವಾತಾವರಣವಾಗಿದೆ. ಅದರ ಸ್ವಚ್ಛತೆ ಕುರಿತು ಮಕ್ಕಳಾದಿಯಾಗಿ ಶ್ರಮವಹಿಸಬೇಕು. ಕಾಲೇಜು ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಮನೋಭಾವ ಸದ್ಯದ ದಿನಗಳಲ್ಲಿ ಬಹಳ ಮಹತ್ವದ್ದಾಗಿದೆ. ಹಾಗಾಗಿ ಪ್ರತಿನಿತ್ಯ ಪತ್ರಿಕೆ, ನಿಯತಕಾಲಿಕೆ ಮತ್ತು ಪಠ್ಯ ಪುಸ್ತಕ ಓದುವ ಹವ್ಯಾಸವನ್ನು ರೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಿರಿಯ ಬಂಡಾಯ ಸಾಹಿತಿಗಳಾದ ಅಲ್ಲಮಪ್ರಭು ಬೆಟ್ಟದೂರು ಅವರು ಮಾತನಾಡಿ, ಸಮಾಜಸೇವೆ ಅನ್ನುವುದು ಕಲಿಯುವುದಲ್ಲ; ಅದು ಸ್ವಯಂ ಕಲಿಕೆಯಿಂದ ಬರುವಂತಹದ್ದು, ಹಾಗಾಗಿ ಮೈಗೂಡಿಸಿಕೊಳ್ಳಲು ಕರೆ ನೀಡಿದರು.

ನಿವೃತ್ತ ಪ್ರಾಚಾರ್ಯ ಬಿ.ಜಿ ಕರಿಗಾರ ಅವರು ಮಾತನಾಡಿ, ಹಿರಿಯರನ್ನು ಗೌರವಿಸಿ, ಉಪಚರಿಸಲು ಮನವಿ ಮಾಡಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶಿವಬಸಪ್ಪ ಹಂಚಿನಾಳ ಅವರು ಮಾತನಾಡಿ, ಗ್ರಾಮದ ಸಮಸ್ತ ಅಭಿವೃದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಉಡಚಪ್ಪ ಭೋವಿ ಅವರು ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆಗೆ ಸಂಪೂರ್ಣ ಸಹಕಾರ ನೀಡಲು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಡಾ ಗಣಪತಿ ಕೆ ಲಮಾಣಿ ಅವರು ಮಾತನಾಡಿ, ಮಕ್ಕಳಲ್ಲಿ ಪರಿಸರ ಕಾಳಜಿ ಮತ್ತು ಸಮಾಜ ಸ್ವಾಸ್ಥ್ಯದ ಅರಿವು ಮುಖ್ಯ. ಮಹಾತ್ಮಾ ಗಾಂಧಿ ಆ ದಿನಗಳಲ್ಲಿಯೇ ಸ್ವಚ್ಛತೆಗೆ ಬಹಳ ಆದ್ಯತೆ ನೀಡಿದ್ದರು. ಗಾಂಧಿ ಮಾರ್ಗ ಆರೋಗ್ಯ ಮಾರ್ಗ ಎಂದು ಹೇಳಿದರು.

ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳಾದ ಡಾ.ನರಸಿಂಹ ಗುಂಜಹಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥ ವಿಠೋಬ ಎಸ್, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಪ್ರದೀಪಕುಮಾರ್ ಯು, ಭೂಗೋಳ ಶಾಸ್ತ್ರ ವಿಭಾಗ ಮುಖ್ಯಸ್ಥರಾದ ಡಾ.ಅಶೋಕ ಕುಮಾರ್, ಗ್ರಾಮ ಪಂಚಾಯಿತಿ ಸದಸ್ಯರಾದ ದ್ಯಾಮನಗೌಡ ಮಾಲಿ ಪಾಟೀಲ, ಶಶಿಕಲಾ ಮಂಜಪ್ಪ ಈಶ್ವರಗೌಡ್ರ ಮತ್ತು ಗ್ರಾಮದ ಮುಖಂಡರು ವೇದಿಕೆಯ ಮೇಲಿದ್ದರು.

ಸಹಾಯಕ ಶಿಬಿರಾಧಿಕಾರಿಗಳಾದ ಶಿವಪ್ಪ ಬಡಿಗೇರ, ಕಲ್ಲಯ್ಯ ವಿ ಪೂಜಾರ್, ವಿರುಪಾಕ್ಷಪ್ಪ ಮುತ್ತಾಳ, ಎಚ್.ಜಿ ಬೊಮ್ಮನಾಳ, ಡಾ.ಆರತಿ ವಿ ಸಜ್ಜನ್, ಲಕ್ಷ್ಮಿ ಹಾಗೂ ತಾರಾಮತಿ ಉಪಸ್ಥಿತರಿದ್ದರು. ಎನ್.ಎಸ್.ಎಸ್ ವಿದ್ಯಾರ್ಥಿನಿ ದ್ರಾಕ್ಷಾಯಿಣಿ ಸ್ವಾಗತಿಸಿದರು, ಮಂಜುಳಾ ಮುಕ್ಕುಂಪಿ ಕಾರ್ಯಕ್ರಮ ನಿರೂಪಿಸಿದರೆ, ಕೊನೆಯಲ್ಲಿ ಸ್ವಾತಿ ವಂದಿಸಿದರು.

# ಶ್ರೀ ಕೃಷ್ಣ ಜಯಂತಿ: ಅಗತ್ಯ ಸಿದ್ಧತೆಗೆ ಸಲಹೆ

**ಕೊಪ್ಪಳ :** ಶ್ರೀ ಕೃಷ್ಣ ಜಯಂತಿ ಆಚರಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ಹೇಳಿದರು.



ಶ್ರೀ ಕೃಷ್ಣ ಜಯಂತಿ ಆಚರಣೆ ಕುರಿತಂತೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಗಸ್ಟ್ 08ರಂದು ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾಡಳಿತದಿಂದ ಶ್ರೀ ಕೃಷ್ಣ ಜಯಂತಿಯ ಆಚರಣೆ ಕಾರ್ಯಕ್ರಮವನ್ನು ಕಳೆದ ವರ್ಷದಂತೆ ಈ ಬಾರಿಯು ಆಗಸ್ಟ್ 26ರ ಬೆಳಿಗ್ಗೆ 10ಗಂಟೆ-ಗೆ ಕೊಪ್ಪಳದ ಶಿರಸಪ್ಪಯ್ಯನ ಮಠ ಬಳಿ ಇರುವ ಶ್ರೀ ಕೃಷ್ಣ ದೇವಸ್ಥಾನದ ಆವರಣದಲ್ಲಿ ಆಚರಿಸಲಾಗುತ್ತಿದೆ.

ಈ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ವೇದಿಕೆ ಅಲಂಕಾರ, ವಿಶೇಷ ಉಪನ್ಯಾಸ ಆಯೋಜನೆ, ಕುಡಿಯುವ ನೀರಿನ ವ್ಯವಸ್ಥೆ, ಜಯಂತಿ ಅಂಗವಾಗಿ ನಡೆಯುವ ಮೆರವಣಿಗೆ ಸಂದರ್ಭದಲ್ಲಿ ರಸ್ತೆ ಸ್ವಚ್ಛತೆ ಸೇರಿದಂತೆ ಎಲ್ಲಾ ವ್ಯವಸ್ಥೆಯನ್ನು ಸಮರ್ಪಕವಾಗಿ ಕೈಗೊಳ್ಳಲು ಅಗತ್ಯ ಏರ್ಪಾಡು ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿ-ದರು.

ಶ್ರೀ ಕೃಷ್ಣ ಜಯಂತಿಯಲ್ಲಿ ಎಲ್ಲ ಸಮಾಜದ ಮುಖಂಡರು, ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಹಾಗೂ ಜಿಲ್ಲಾಡಳಿತಕ್ಕೆ ಅಗತ್ಯ ಸಹಕಾರ ನೀಡಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಸಭೆಯ ಮೂಲಕ ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಂಶುಪಾಲರದ ಕೃಷ್ಣಮೂರ್ತಿ ದೇಸಾಯಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮರಬನಳ್ಳಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಎ.ಬಸವರಾಜ, ಸಮಾಜದ ಮುಖಂಡರಾದ ನಾರಾಯ-ಣಗೌಡ ಪಾಟೀಲ, ಜಗನ್ನಾಥ ಯಾದವ, ಭೀಮಣ್ಣ ಲೇಬಗೇರಿ, ಯಂಕಪ್ಪ ವಾಲಿಕಾರ, ವೆಂಕಟೇಶ, ರಾಮ ಬಾಗಲಿ, ಪರುಶುರಾಮ ಸೇರಿದಂತೆ ಇನ್ನೂ ಪ್ರಮುಖರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಪರಿಸರ ಸ್ನೇಹಿ ಗೌರಿಗಣೇಶ ಹಬ್ಬ ಆಚರಿಸಲು ಮಾಲಿನ್ಯ ನಿಯಂತ್ರಣ ಮಂಡಳಿಯ ಮನವಿ

**ಕೊಪ್ಪಳ :** ಪರಿಸರ ಸ್ನೇಹಿ ಗೌರಿ ಗಣೇಶ ಹಬ್ಬ ಆಚರಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೊಪ್ಪಳ ಪ್ರಾದೇಶಿಕ ಕಚೇರಿಯ ಪರಿಸರ ಅಧಿಕಾರಿಗಳು ಕೊಪ್ಪಳ ಜಿಲ್ಲೆಯ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಪ್ರತಿ ವರ್ಷದಂತೆ ಈ ಬಾರಿಯೂ ಸ್ವರ್ಣಗೌರಿ ಹಾಗೂ ವರಸಿದ್ದಿ ವಿನಾಯಕಚತುರ್ಥಿ ಹಬ್ಬವು ಸಮೀಪಿಸುತ್ತಿದೆ. ಈ ಸಂದರ್ಭದಲ್ಲಿ ಸಾರ್ವಜನಿಕರು ಪ್ಲಾಸ್ಟರ್ ಆಫ್ ಪ್ಯಾರಿಸ್(ಪಿ.ಒ.ಪಿ) ಮತ್ತು ಬಣ್ಣದ ವಿಗ್ರಹಗಳನ್ನು ಸ್ಥಾಪಿಸಿ ಪೂಜಿಸಿದ ನಂತರ ಕೆರೆ, ಬಾವಿ ಹಾಗೂ ಇನ್ನಿತರೆ ನೈಸರ್ಗಿಕ ಜಲಮೂಲಗಳಲ್ಲಿ ವಿಸರ್ಜಿಸುವುದು ಸಂಪ್ರದಾಯವಾಗಿದ್ದು,ಇದರಿಂದಾಗಿನೈಸರ್ಗಿಕ ಜಲಮೂಲಗಳು ಕಲುಷಿತಗೊಂಡು ಇವುಗಳ ಭೌತಿಕ ಹಾಗೂ ರಾಸಾಯನಿಕ ಗುಣಗಳು ಮಾರ್ಪಟ್ಟು ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುವುದಲ್ಲದೇ ಪ್ರಾಣಿ, ಪಕ್ಷಿ ಹಾಗೂ ಜಲಚರಗಳ ಜೀವಕ್ಕೆ ಅಪಾಯವಾಗುತ್ತದೆ. ಇದಲ್ಲದೇ ಸಾರ್ವಜನಿಕ ಆರೋಗ್ಯಕ್ಕೂ ದ-ಕ್ಕೆ ಉಂಟಾಗುತ್ತದೆ. ಇದರನ್ವಯ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಹಬ್ಬದ ಆಚರಣೆಯಿಂದ ನೈಸರ್ಗಿಕ ಜಲ ಮೂಲಗಳನ್ನು ರಕ್ಷಿಸುವ ನಿಟ್ಟಿನಲ್ಲಿ 2016ರ ಜುಲೈ 20ರಂದು ಅಧಿಸೂಚನೆಯನ್ನು ಹೊರಡಿಸಿದ್ದು, ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ಬಣ್ಣ ಲೇಪಿತವಾದ ವಿಗ್ರಹಗಳನ್ನು ಇನ್ಮುಂದೆ ರಾಜ್ಯದ ಯಾವುದೇ ಕೆರೆ ಮತ್ತು ಇತ-ರೇ ಜಲ ಮೂಲಗಳಲ್ಲಿ ವಿಸರ್ಜಿಸುವುದನ್ನು ನಿಷೇಧಿಸಲಾಗಿದೆ. ಸಾರ್ವಜನಿಕರು ಪರಿಸರ ಸ್ನೇಹಿ ಗೌರಿಗಣೇಶ ಹಬ್ಬ ಆಚರಿಸಿ ನೈಸರ್ಗಿಕ ಜಲ ಸಂಪನ್ಮೂಲಗಳನ್ನು ಸಂರಕ್ಷಿಸಲು ಸಹಕರಿಸಬೇಕು. ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ಬಣ್ಣ ಲೇಪಿತವಾದ ವಿಗ್ರಹಗಳನ್ನು ತಯಾರಿಸಬಾರದೆಂದು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974ರ ಪ್ರಕಾರ ಕಲಂ 33 (ಎ) ಅನ್ವಯ ರಾಜ್ಯದ ಯಾವುದೇ ಜಲ ಮೂಲಗಳಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ಮತ್ತುಬಣ್ಣಲೇಪಿತವಾದವಿಗ್ರಹಗಳನ್ನು ವಿಸರ್ಜಿಸುವುದನ್ನು ನಿಷೇಧಿಸಲಾಗಿದೆ. ಈ ಆದೇಶವನ್ನು ಉಲ್ಲಂಘಿಸಿದ್ದಲ್ಲಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳು: ತೈಲ ಬಣ್ಣಗಳು ಅಪಾಯಕಾರಿ ರಾಸಾಯನಿಕಗಳಿಂದ ಕೂಡಿದ್ದು, ಜೇಡಿ ಮಣ್ಣಿನಿಂದ ಮಾಡಿದ ಹಾಗೂ ನೈಸರ್ಗಿಕ ಬಣ್ಣಗಳಿಂದ ಮಾಡಿರುವ ಗಣೇಶ ಮೂರ್ತಿಗಳನ್ನು ಪೂಜಿಸಬೇಕು. ಗೌರಿಗಣೇಶ ಹಬ್ಬದ ಸಂದರ್ಭದಲ್ಲಿ ಬಣ್ಣರಹಿತ ಮಣ್ಣಿನ ಅಥವಾ ನೈಸರ್ಗಿಕ ಮೂರ್ತಿಗಳೊಂದಿಗೆ ಹಬ್ಬ ಆಚರಿಸಿ ತದನಂತರ ಗೌರಿಗಣೇಶ ಮೂರ್ತಿಗಳನ್ನು ನಗರಸಭೆ, ಪುರಸಭೆ ವತಿಯಿಂದ ನಿಗದಿಪಡಿಸಿರುವ ಸ್ಥಳಗಳಲ್ಲಿ ಅಥವಾಕರ್ನಾಟಕರಾಜ್ಯಮಾಲಿನ್ಯನಿಯಂತ್ರಣ ಮಂಡಳಿಯ ಸಂಚಾರಿ ವಾಹನದಲ್ಲಿಯೇ ಮೂರ್ತಿಗಳನ್ನು ವಿಸರ್ಜಿಸಬೇಕು

ಗೌರಿಗಣೇಶ ಮೂರ್ತಿಗಳನ್ನು ವಿಸರ್ಜಿಸುವ ಸಂದರ್ಭದಲ್ಲಿ ಹಸಿ ಕಸ (ಹೂ, ಹಣ್ಣು, ಬಾಳೆ ಕಂಬ,ಮಾವಿನತೋರಣಇತ್ಯಾದಿಅಲಂಕಾರಿಕ ವಸ್ತುಗಳು) ಪ್ರತ್ಯೇಕಿಸಿ ಮೂರ್ತಿಗಳೊಂದಿಗೆ ನೀರಿಗೆ ವಿಸರ್ಜಿಸದೇ, ಪ್ರತ್ಯೇಕಿಸಿ ನಗರಸಭೆ, ಪುರಸಭೆಯ ಕಸ ಸಂಗ್ರಹಣ ವಾಹನಕ್ಕೆ ನೀಡಬೇಕು. ಸಾರ್ವಜನಿಕವಾಗಿ ನಡೆಸುವ ಗಣೇಶ ಮೂರ್ತಿಯ ಉತ್ಸವದ ಚಪ್ಪರಕ್ಕೆ ಪರಿಸರ ಸ್ನೇಹಿ ವಸ್ತುಗಳನ್ನೇ ಬಳಸಿ ನಿಷೇಧಿತ ಪ್ಲಾಸ್ಟಿಕ್ ವಸ್ತುಗಳ ಬಳಕೆ ಮಾಡಬಾರದು. ಶಬ್ದ ಮಾಲಿನ್ಯ (ನಿರ್ಬಂಧ ಮತ್ತು ನಿಯಂತ್ರಣ) ನಿಯಮಗಳು-2000 ರನ್ವಯ 2022 ಮೇ 10 ರಂದು ಹೊರಡಿಸಿರುವ ಸುತ್ತೋಲೆಯಂತೆ ನಿಬಂಧನೆಗಳಿಗೆ ಅನುಸಾರವಾಗಿ ಧ್ವನಿವರ್ಧಕ, ಸಾರ್ವಜನಿಕ ಗಣೇಶ ಪೆಂಡಾಲ್ ಗಳಲ್ಲಿ ಬಳಸುವ ವಿದ್ಯುನ್ಮಾನ ಉಪಕರಣಗಳು ಮತ್ತು ಶಬ್ದ ಉಂಟು ಮಾಡುವ ಉಪಕರಣಗಳನ್ನು ಬಳಸಲು ಪೋಲಿಸ್ ಇಲಾಖೆಯಿಂದ ಅನುಮತಿ ಪಡೆಯಬೇಕು ಎಂದು ಕರ್ನಾಟಕ ರಾಜ್ಯಮಾಲಿನ್ಯನಿಯಂತ್ರಣಮಂಡಳಿ,ಕೊಪ್ಪಳ ಪ್ರಾದೇಶಿಕ ಕಚೇರಿಯ ಪ್ರಕಟಣೆ ತಿಳಿಸಿದೆ.

# ಸುಭಾಸ್ ಚಂದ್ರ ಬೋಸ್ ಸ್ಕೌಟ್ಸ್ ಘಟಕದ ವಿದ್ಯಾರ್ಥಿಗಳಿಗೆ ದೀಕ್ಷಾ

**ಕೊಪ್ಪಳ :** ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೊಪ್ಪಳ ಜಿಲ್ಲಾ ಸಂಸ್ಥೆಯಿಂದ ತಾಲ್ಲೂಕಿನ ಕಿನ್ನಾಳ ಗ್ರಾಮದ ಕುವೆಂಪು ಶತಮಾನೋತ್ಸವ ಮಾದರಿಯ ಶಾಲೆಯಲ್ಲಿ ಆಗಸ್ಟ್ 06ರಂದು ಸುಭಾಸ್ ಚಂದ್ರ ಬೋಸ್ ಸ್ಕೌಟ್ಸ್ ಘಟಕದ ವಿದ್ಯಾರ್ಥಿಗಳಿಗೆ "ದೀಕ್ಷಾ ಸಮಾರಂಭ" ಕಾರ್ಯಕ್ರಮ ನಡೆಯಿತು.




ಶಾಲೆಯ ಸ್ಕೌಟ್ಸ್ ಶಿಕ್ಷಕರಾದ ಪ್ರಭಾಕರ್ ದಾಸರ್ ಅವರು ಜಿಲ್ಲಾ ಕಾರ್ಯದರ್ಶಿಗಳು ವಿದ್ಯಾರ್ಥಿಗಳಿಗೆ ದಿಕ್ಷಾ ನಿಡಿದರು. ಮತ್ತು ಶಾಲೆಯ ಮುಖ್ಯ ಗುರುಗಳಾದ ಮಾರುತಿ ಅರೇರ್ ಕಾರ್ಯಕ್ರಮ ಕುರಿತು ಮಾತನಾಡಿ ಘಟಕಕ್ಕೆ ಸೇರಿದ ಎಲ್ಲಾ ಸ್ಕೌಟ್ ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಕೊಪ್ಪಳ ಎ.ಎಸ್.ಓ.ಸಿ ಶರೀಫ್ ಹತ್ತಿಮತ್ತೂರ್, ಶಾಲೆಯ ಗೈಡ್ಸ್ ಶಿಕ್ಷಕಿರಾದ ಬಸಮ್ಮ ಗುಜ್ಜಲ್ ಮತ್ತು ಶಾಲೆಯ ಎಲ್ಲಾ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಶಾಂತವಾಗಿ ಹರಿಯುತ್ತಿರುವ ಕೃಷ್ಣೆ: ನೀರು ಇಳಿಮುಖ



**ರಬಕವಿ-ಬನಹಟ್ಟಿ :** ಭಾರಿ ಅನಾಹುತ ಸೃಷ್ಟಿಸುವ ಸಂದೇಶ ಹೊಂದಿದ್ದ ಪ್ರದೇಶದಲ್ಲಿ ಇದೀಗ ನೀರು ಇಳಿಮುಖ ಹೊಂದುತ್ತಿದೆ.

ಕೃಷ್ಣೆಯು ತನ್ನ ಒಡಲತ್ತ ತೆರಳುತ್ತಿದ್ದು, ಮಹಾರಾಷ್ಟ್ರದಲ್ಲಿ ಮಳೆರಾಯನ ಅಬ್ಬರ ಕಡಿಮೆಯಾಗಿರುವ ಕಾರಣ ಕೃಷ್ಣೆ ಶಾಂತವಾಗಿ ಹರಿಯುವಲ್ಲಿ ಕಾರಣವಾಗಿದೆ.

ರಬಕವಿ-ಬನಹಟ್ಟಿ ತಾಲೂಕಿನ ಹಿಪ್ಪರಗಿ ಜಲಾಶಯದಲ್ಲಿರುವ ಎಲ್ಲ 22 ಗೇಟ್‌ಗಳ ಮೂಲಕ ನೀರು ಮಹಾರಾಷ್ಟ್ರದಿಂದ ಬಂದಷ್ಟೇ ಹೊರ ಹಾಕಲಾಗುತ್ತಿದೆ.

ಕೃಷ್ಣೆಯು ಈಗ ನೀರಿನ ಅಬ್ಬರ ನಿಲ್ಲಿಸಿದ್ದು ಶಾಂತವಾಗಿ ಹರಿಯುತ್ತಿರುವದು ಎಲ್ಲರ ನೆಮ್ಮದಿಗೆ ಕಾರಣವಾಗಿದೆ. ಮಹಾರಾಷ್ಟ್ರದಿಂದ ಶುಕ್ರವಾರದಂದು ಸದ್ಯ 1.78 ಕ್ಯುಸೆಕ್‌ನಷ್ಟು ನೀರು ಹರಿದು ಬರುತ್ತಿದೆ. ಬಂದಷ್ಟೆಲ್ಲ ನೀರು ಹೊರ ಹಾಕಲಾಗುತ್ತಿರುವ ಕಾರಣ ಅಧಿಕಾರಿಗಳು ಮುಂದಾಲೋಚಣೆಯಿಂದ ಪ್ರವಾಹ ತಪ್ಪಿಸುವಲ್ಲಿ ಸಕಲ ಸಿದ್ಧತೆಯಲ್ಲಿದ್ದು, ಹಿಪ್ಪರಗಿ ಜಲಾಶಯದಲ್ಲಿ ಸದ್ಯ ಯಾವದೇ ರೀತಿ ನೀರನ್ನು ಸಂಗ್ರಹ ಮಾಡುತ್ತಿಲ್ಲ.

> 'ಜಾಕವೆಲ್‌ಗೆ ತೆರಳುವ ರಸ್ತೆಯು ಇನ್ನೆರಡು ದಿನಗಳಲ್ಲಿ ಸಂಪೂರ್ಣ ಮುಕ್ತವಾಗಲಿದೆ. ನದಿಯತ್ತ ಜನತೆ ಬರಬಾರದು. ಇನ್ನೂ ನೀರಿನ ಹರಿವಿನ ಪ್ರಮಾಣ ಹೆಚ್ಚಿದೆ. ನೀರಿನೊಳಗೆ ಯಾರೂ ಇಳಿಯಬಾರದು.'
>
> । ಜಗದೀಶ ಈಟಿ, **ಪೌರಾಯುಕ್ತರು, ರಬಕವಿ-ಬನಹಟ್ಟಿ ನಗರಸಭೆ.**

# ಘಟಪ್ರಭಾ ಪ್ರವಾಹ ಇಳಿಮುಖ: ಸಂಚಾರಕ್ಕೆ ಮುಕ್ತವಾದ ಸೇತುವೆಗಳು





**ಮಹಾಲಿಂಗಪುರ :** ಮಹಾರಾಷ್ಟ್ರದಲ್ಲಿ ಮಳೆಯ ಪರಿಣಾಮ ಜುಲೈ 20 ರಿಂದ ತುಂಬಿ ಹರಿಯುತ್ತಿದ್ದ ಘಟಪ್ರಭಾ ನದಿಯ ಪ್ರವಾಹ ಕಳೆದ ಎರಡು ದಿನಗಳಿಂದ ಇಳಿಮುಖವಾಗಿದೆ.

ಜುಲೈ 20 ರಿಂದ ಜಲಾವೃತವಾಗಿದ್ದ ನಂದಗಾಂವ-ಅವರಾದಿ, ಮಿರ್ಜಿ-ಅಕ್ಕಿಮರಡಿ, ಢವಳೇಶ್ವರ-ಢವಳೇಶ್ವರ ಸೇರಿದಂತೆ ಮೂರು ಸೇತುವೆಗಳು ಪ್ರವಾಹ ನೀರಿನಿಂದ ಮುಕ್ತವಾಗಿ ಶುಕ್ರವಾರ ಮುಂಜಾನೆಯಿಂದ ಸೇತುವೆಗಳ ಮೇಲಿನ ಸಂಚಾರ ಪ್ರಾರಂಭವಾಗಿದೆ.

ಈ ಭಾಗದಲ್ಲಿನ ಈ ಮೂರು ಸೇತುವೆಗಳು ಜಲಾವೃತವಾಗಿದ್ದರಿಂದ ಕಳೆದ 20 ದಿನಗಳಿಂದ ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಯ ಗಡಿಭಾಗದಲ್ಲಿನ ಹತ್ತಾರು ಗ್ರಾಮಗಳ ಸಂಪರ್ಕ ಕಡಿತವಾಗಿ ಗೋಕಾಕ-ಕೊಣ್ಣೂರ, ಮುಧೋಳ-ಲೋಕಾಪೂರ ಮಾರ್ಗವಾಗಿ 70-80 ಕಿ.ಮೀ ಸುತ್ತುವರೆದು ಹೋಗುವಂತಹ ಸ್ಥಿತಿಯು ನಿರ್ಮಾಣವಾಗಿತ್ತು. ಈಗ ಮೂರು ಸೇತುವೆಗಳು ಸಂಚಾರಕ್ಕೆ ಮುಕ್ತವಾಗಿವೆ.

**ಮರಳಿ ಮನೆ ಸೇರಿದ ಸಂತ್ರಸ್ಥರು :** ಘಟಪ್ರಭಾ ಪ್ರವಾಗದಿಂದ ಸಂಪೂರ್ಣ ನಡುಗಡ್ಡೆಯಾಗಿದ್ದ ಹಳೆನಂದಗಾಂವ ಗ್ರಾಮದ ರಸ್ತೆಯ ಮೇಲಿನ ನೀರು ಇಳಿಮುಖವಾದ್ದರಿಂದ ಬುಧವಾರ, ಗುರುವಾರವೇ ಸ್ಥಳಾಂತರಗೊಂಡಿದ್ದ 52 ಕುಟುಂಬಸ್ಥರು, ಕಾಳಜಿಕೇಂದ್ರ ಮತ್ತು ಬೀಗರ ಮನೆಗಳಿಂದ ತಮ್ಮ ತಮ್ಮ ಮನೆಗಳಿಗೆ ತೆರಳಿದ್ದಾರೆ. ಢವಳೇಶ್ವರದ ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿದ್ದ 15 ಕುಟುಂಬಗಳು ಮರಳಿ ತಮ್ಮ ತಮ್ಮ ಮನೆಗಳಿಗೆ ತೆರಳಿದ್ದಾರೆ.

ಶುಕ್ರವಾರದ ಮಧ್ಯಾಹ್ನ ಮಾಹಿತಿಯಂತೆ ಘಟಪ್ರಭಾ ನದಿಗೆ ಕೇವಲ 5 ಸಾವಿರ ಕ್ಯೂಸೆಕ್ ಮಾತ್ರ ನೀರು ಹರಿದು ಬರುತ್ತಿರುವದರಿಂದ ನದಿ ಪಾತ್ರದ ಜನರಿಗೆ ಪ್ರವಾಹದ ಆತಂಕ ದೂರವಾಗಿದೆ.

# ಪೂರ್ವಭಾವಿ ಸಭೆ: ಸೆ.17ರಿಂದ 20ರವರೆಗೆ ಮಹಾಲಿಂಗೇಶ್ವರ ಜಾತ್ರಾಮಹೋತ್ಸವಕ್ಕೆ ನಿರ್ಧಾರ



**ಮಹಾಲಿಂಗಪುರ :** ಪಟ್ಟಣದ ಆರಾಧ್ಯದೈವ ಶ್ರೀಮಹಾಲಿಂಗೇಶ್ವರ 2024ನೇ ಸಾಲಿನ ಜಾತ್ರಾ ಮಹೋತ್ಸವವನ್ನು ಸೆ.17ರಿಂದ 20ರವರೆಗೆ ನಾಲ್ಕು ದಿನಗಳ ಕಾಲ ನಡೆಸಲು ತಿರ್ಮಾಣಿಸಲಾಯಿತು.

ಪೀಠಾಧಿಪತಿ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಜಿಯವರ ದಿವ್ಯ ಸಾನಿಧ್ಯದಲ್ಲಿ ಗುರುವಾರ ಮಠದಲ್ಲಿ ಜರುಗಿದ ಜಾತ್ರಾಕಮಿಟಿಯ ಪೂರ್ವಭಾವಿ ಸಭೆಯಲ್ಲಿ ಪ್ರಸಕ್ತ ಸಾಲಿನ ಜಾತ್ರಾಮಹೋತ್ಸವದ ದಿನಾಂಕವನ್ನು ನಿಗದಿಪಡಿಸಲಾಯಿತು.

ಸೆಪ್ಟಂಬರ್ 17ರಂದು ಮಂಗಳವಾರ ಚನ್ನಗೀರಿ ಪರ್ವತದಲ್ಲಿ ಜಾತ್ರಾ ಜಟೋತ್ಸವ, ಸೆ.18ರ ಬುಧವಾರ ಅನಂತನ ಹುಣ್ಣಿಮೆಯ ದಿನ ತುಂಬಿದ ತೇರು(ರಥೋತ್ಸವ), ಸೆ.19ರ ಗುರುವಾರ ಮರುತೇರು, ಸೆ.20ರಂದು ಗೋಕಾಕ ರಸ್ತೆಯ ಗಾಂಧಿ ಮೈದಾನದಲ್ಲಿರುವ ಕುಸ್ತಿ ಕಣದಲ್ಲಿ ರಾಷ್ಟ್ರಮಟ್ಟದ ಜಂಗೀನಿಕಾಲಿ ಕುಸ್ತಿಗಳನ್ನು ನಡೆಸಲು ತಿರ್ಮಾನಿಸಲಾಯಿತು. ಮಹಾಲಿಂಗೇಶ್ವರ ಜಾತ್ರಾ ಕಮಿಟಿಯ ಅಧ್ಯಕ್ಷ ರವಿಗೌಡ ಪಾಟೀಲ, ಪಟ್ಟಣದ ಹಿರಿಯರಾದ ಲಕ್ಷ್ಮಣಗೌಡ ಪಾಟೀಲ, ಯಲ್ಲನಗೌಡ ಪಾಟೀಲ, ಮಹಾಂತೇಶ ಹಿಟ್ಟಿನಮಠ, ಕೃಷ್ಣಗೌಡ ಪಾಟೀಲ, ಆಚಾರ್ಯ ಅನೀಲ ಜೋಶಿ, ಮಹಾಲಿಂಗಪ್ಪ ತಟ್ಟಿಮನಿ, ಬಸವರಾಜ ಪಶ್ಚಾಪೂರ, ಲಕ್ಕಪ್ಪ ಚಮಕೇರಿ, ಮಲ್ಲಿಕಾರ್ಜುನ ಕುಳ್ಳೊಳ್ಳಿ, ಮಹಾಲಿಂಗಪ್ಪ ಕೋಳಿಗುಡ್ಡ, ಗುರುಪಾದಯ್ಯ ಛಟ್ಟಿಮಠ,ಚಂದ್ರುಗೊಂದಿ,ಈರಪ್ಪದಿನ್ನಿಮನಿ,ಪ್ರಕಾಶ ಅರಳಿಕಟ್ಟಿ, ಬಸವರಾಜ ಘಂಟಿ, ಚನ್ನಪ್ಪ ಕೋಳಿಗುಡ್ಡ, ಚನ್ನಪ್ಪ ಪಟ್ಟಣಶೆಟ್ಟಿ, ಸುಭಾಸ ವಜ್ಜರಮಟ್ಟಿ, ವಿಜಯ ಕುಳ್ಳೊಳ್ಳಿ, ಅರವಿಂದ ಮಾಲಬಸರಿ, ಮುತ್ತಪ್ಪ ದಲಾಲ, ಮಹಾಲಿಂಗ ಮಾಳಿ, ಎಸ್.ಆರ್.ನಾಯಕ, ವಿಷ್ಣುಗೌಡ ಪಾಟೀಲ, ನಾಗಪ್ಪ ಖೋತ, ಹಣಮಂತ ಬುರುಡ ಸೇರಿದಂತೆ ಹಿರಿಯರು ಹಾಗೂ ಶ್ರೀಮಠದ ನೂರಾರು ಸೇವಕರು ಸಭೆಯಲ್ಲಿ ಭಾಗವಹಿಸಿದ್ದರು.

# ಸರಕಾರಿ ಶಾಲೆಗಳ ಅಭಿವೃದ್ದಿಗೆ ಸಾರ್ವಜನಿಕರ ಸಹಕಾರ ಅವಶ್ಯ-ಹಳಮನಿ ಚಿಮ್ಮಡ ಶಾಲಾ ವಿದ್ಯಾರ್ಥಿನಿಯರಿಗೆ ವಿಶೇಷ ಸಮವಸ್ತ್ರ ವಿತರಣೆ






**ಚಿಮ್ಮಡ :** ಸರಕಾರಿ ಶಾಲೆಗಳ ಅಭೀವೃದ್ದಿಗೆ ಸಾರ್ವಜನಿಕರ ಸಹಕಾರ ಅವಶ್ಯವಾಗಿದ್ದು ಗ್ರಾಮೀಣ ಭಾಗಗಳಲ್ಲಿ ಸ್ಪಂದನೆ ದೊರೆಯುತ್ತಿರುವುದು ಸಂತಸದ ಸಂಗತಿ ಎಂದು ಶಿಕ್ಷಣ ಸಂಯೋಜಕ ಬಿ.ಎಂ ಹಳಮನಿ ಹೇಳಿದರು.

ಗ್ರಾಮದ ಸರಕಾರಿ ಹೆಣ್ಣು ಮಕ್ಕಳ ಹಿರಿಯ ಮಾದರಿ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಎಸ್ಡಿಎಂಸಿ ಸದಸ್ಯರಿಂದ ನೀಡಲಾದ ವಿಶೇಷ ಸಮವಸ್ತ್ರ ವಿತರಣಾ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಗಳಾಗಿ ಆಗಮಿಸಿ ಮಾತನಾಡಿದ ಅವರು ಸರಕಾರ ಹಲವಾರು ಸೌಲಭ್ಯಗಳನ್ನು ನೀಡುತಿದ್ದರೂ ವಿಶೇಷ ಸೌಲಭ್ಯಗಳನ್ನು ಸರಕಾರಿ ಶಾಲೆಗಳಿಗೆ ನೀಡುವ ಮೂಲಕ ಖಾಸಗೀ ಶಾಲೆಗಳೊಂದಿಗೆ ಪೈಪೋಟಿ ನೀಡುತ್ತಿವೆ, ಇದಕ್ಕೆ ಸಹಾಯ ಸಹಕಾರ ನೀಡುತ್ತಿರುವ ಶಾಲಾ ಸುಧಾರಣಾ ಸಮೀತಿ ಹಾಗೂ ಗ್ರಾಮದ ಶಿಕ್ಷಣ ಪ್ರೇಮಿಗಳಕಾರ್ಯ ಶ್ಲಾಘನೀಯವೆಂದರು.

ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಗೆ ವಿಶೇಷ ಸಮವಸ್ತ್ರ ವಿತರಿಸುವ ಮೂಲಕ ಉದ್ಘಾಟಿಸಲಾಯಿತು.

ಸಿಆರ್‌ಪಿ ಶ್ರೀಮತಿ ದ್ರಾಕ್ಷಾಯಿಣಿ ಮಂಡಿ, ಗ್ರಾ.ಪಂ. ಸದಸ್ಯ ಮಹಾಲಿಂಗ ಮಾಯಣ್ಣವರ, ಶಿವಾನಂದ ಬೆಳಗಲಿ, ಪ್ರಭಾರಿ ಮುಖ್ಯಗುರು ಎಸ್.ಎ. ಬಿರಾದರ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್ಡಿಎಂಸಿ ಅಧ್ಯಕ್ಷ ಮೋನೇಶ ಬಡಿಗೇರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉಪಾಧ್ಯಕ್ಷೆ ಶ್ರೀಮತಿ ಅಣ್ಣಪೂರ್ಣ ಅಥಣಿ, ಇಮಾಮ ಯಾದವಾಡ, ಪರಪ್ಪಾ ದೇವಗೋಳ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಶಿಕ್ಷಕ ಬಿ.ಡಿ. ನೇಮಗೌಡ ಸ್ವಾಗತಿಸಿ ನಿರೂಪಿಸಿದರು.





# ಮಹಾಲಿಂಗಪುರ: ಪ್ರೇಮಿಗಳ ಆತ್ಮಹತ್ಯೆ

**ಮಹಾಲಿಂಗಪುರ :** ಸಮೀಪದ ನಂದಗಾಂವ ಗ್ರಾಮದ ಭೀರಪ್ಪ ದಳವಾಯಿ ಅವರ ತೋಟದ ಮರಕ್ಕೆ ಪ್ರೇಮಿಗಳಿಬ್ಬರು ನೇಣು ಬೀಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಂದಗಾಂವ ಗ್ರಾಮದ ಸಚೀನ ಭೀರಪ್ಪ ದಳವಾಯಿ (22), ಪ್ರತಿಭಾ ಮಲ್ಲಪ್ಪ ಮಡಿವಾಳ(19) ಮೃತರು. ಎರಡು ವರ್ಷದಿಂದ ಪರಸ್ಪರ ಪ್ರೀತಿಸುತ್ತಿದ್ದ ಇವರಿಬ್ಬರ ಮದುವೆಗೆ ಹಿರಿಯರು ಒಪ್ಪದ ಕಾರಣ, ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಘಟನಾ ಸ್ಥಳಕ್ಕೆ ಜಮಖಂಡಿ ಡಿವೈಎಸ್‌ಪಿ ಈ.ಶಾಂತವೀರ, ಪಿಎಸ್‌ಆಯ್ ಕಿರಣ ಸತ್ತಿಗೇರಿ ಭೇಟಿ ನೀಡಿ ಪರಿಶೀಲಿಸಿದರು. ಈ ಕುರಿತು ಮಹಾಲಿಂಗಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸಂಭ್ರಮದ ನಾಗೇಶ್ವರ ಕಳಸಾರೋಹಣ



**ರಬಕವಿ-ಬನಹಟ್ಟಿ :** ಇಲ್ಲಿನ ಹಳೆ ನೀರಿನಟಾಕಿ ಹತ್ತಿರದ ನಾಗೇಶ್ವರ ದೇವಾಲಯ ನೂತನ ಗೋಪುರಕ್ಕೆ ಕಳಸಾರೋಹಣ ಜಾತ್ರೆ ನಿಮಿತ್ತ ಗುರುವಾರ ಸಂಭ್ರಮದಿಂದ ಜರುಗಿತು.

ದೇವಾಲಯವನ್ನು ಹೂ, ದೀಪಗಳಿಂದ ಶೃಂಗರಿಸಲಾಗಿತ್ತು.

ಹಿರೇಮಠದ ಶರಣಬಸವ ಶಿವಾಚಾರ್ಯರರ ಅಮೃತ ಹಸ್ತದಿಂದ ಕಳಸಾರೋಹಣ ನೆರವೇರಿಸಿ ಮಾತನಾಡಿದ ಅವರು, ಪಟ್ಟಣದಲ್ಲಿಯೂ ನಾಗೇಶ್ವರ ಆರಾಧನೆಯಿಂದ ಶಾಂತಿ ನೆಮ್ಮದಿ,ಸಮೃದ್ಧಿ ನೆಲೆಸಲು ಸಾಧ್ಯ. ಇಂತಹ ಧಾರ್ಮಿಕ ಕಾರ್ಯವಮಾಡುತ್ತಿರುವದು ಶ್ಲಾಘನೀಯವೆಂದರು.

ಇದಕ್ಕೂ ಮೊದಲು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವದೊಂದಿಗೆ ಕಳಸಾರೋಹಣ ಮೆರವಣಿಗೆ ನಡೆಯಿತು.

ಜನತೆ ಅತ್ಯಂತ ಸಂಭ್ರಮದಿಂದ ಸ್ವಾಗತಿಸಿದರು. ಮೆರವಣಿಗೆಯ ರಸ್ತೆಯುದ್ದಕ್ಕೂ ರಂಗೋಲಿ ಚಿತ್ತಾರ ಬಿಡಿಸಲಾಗಿತ್ತು.

ಕರಡಿ ಮಜಲು ಸೇರಿದಂತೆ ಕುಂಭ ಹೊತ್ತ ಮಹಿಳೆಯರು ಹೀಗೆ ಅತ್ಯಂತ ವಿಜೃಂಭಣೆಯಿಂದ ಕಾರ್ಯಕ್ರಮ ಮೆರವಣಿಗೆ ನಡೆಯಿತು. ಯರಗುದ್ರಿಯ ಜಂಗಮ ಮಠದ ಸಂಗಮೇಶ್ವರ ಮಹಾಸ್ವಾಮೀಜಿ. ರಘುನಾಥ ಮಹಾರಾಜರು ಸಾನಿಧ್ಯ ವಹಿಸಿದ್ದರು.

ಪರಪ್ಪ ಸಜ್ಜಿ, ಬಸವರಾಜ ರಾವಳ, ಕಾಶಿನಾಥ ಬಳೂರಗಿ, ರಾಚು ಅಮಟಿ, ಪಂಡಿತ ಶಿರೋಳ, ಕಾಡಪ್ಪ ಶಿರೋಳ, ನಿಜಗುಣಿ ಚನಪನ್ನವರ, ಶಂಕರ ಚಿಮ್ಮಡ, ಸಂಗಪ್ಪ ಕಾಗಿ, ಕಾಡು ಶೀಲವಂತ, ಅನೀಲ ತಂಬದ, ಕಲ್ಲಪ್ಪ ಬಡಿಗೇರ, ಈರಪ್ಪ ಕಾಗಿ ಸೇರಿದಂತೆ ಅನೇಕರಿದ್ದರು.

# ದಯೆ ಸುಖದ ಹೆಬ್ಬಾಗಿಲು

**ಮುಧೋಳ :** ಧರ್ಮಗಳು ಬೇರೆ ಬೇರೆಯಾದರೂ ಅವುಗಳ ಮರ್ಮ ಒಂದೇಯಾಗಿದೆ. ದಯೆ ಇಲ್ಲದ ಧರ್ಮ ಯಾವುದೂ ಇಲ್ಲ. ಹಾಗಾಗಿ ದಯೆ ಎಂಬುವುದು ಸುಖದ ಹೆಬ್ಬಾಗಿಲು ಎಂದು ಶ್ರೀ ಸಿದ್ಧಾರೂಢ ಭಾರತಿ ಆಶ್ರಮದ ಶರಣ ಬಸವ ಶಾಸ್ತ್ರೀಜಿಯವರು ಅಭಿಪ್ರಾಯಪಟ್ಟರು. ತಾಲೂಕಿನ ಮುಗಳಖೋಡ ಕ್ರಾಸ್ ಬಸವ-ನಗರದಲ್ಲಿ ಜಗದ್ಗುರು ಶಿವಾನಂದ ಭಾರತಿ ಆಶ್ರಮದಲ್ಲಿ ಶ್ರಾವಣ ಮಾಸದ ಅಂಗವಾಗಿ ಜರುಗಿದ, ಕಾಮಧೇನು ಕಲ್ಪಧೃಮ ಶಿವಾವತಾರಿ ಶ್ರೀ ಸಿದ್ಧಾರೂಢರ ಪುರಾಣ ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸಿ ಚಾಲನೆ ನೀಡಿದ ಅವರು ಶ್ರೀ ಸಿದ್ಧಾರೂಢರ ಲೀಲಾ ಪ್ರಸಂಗಗಳನ್ನು ಹೇಳುತ್ತಾ ಭಕ್ತರ ಇಚ್ಚಿತಾರ್ಥ ಪೂರೈಸುವ ಮಹಾತ್ಮಾ ಅವತಾರಿಕ ಮಹಾಪುರುಷ ಸಿದ್ಧಾರೂಢರು ಎಂದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಶಿವಾನಂದ ಶ್ರೀ ಗಳನ್ನು, ಪ್ರವಚನಕಾರರಾದ ಶರಣಬಸವ ಶಾಸ್ತ್ರಿಗಳನ್ನು ಶ್ರೀ ಮಠದ ಹಿರಿಯರಾದ ಪರಮಾನಂದ ಮಂಟೂರ, ಸಂಗಪ್ಪ ಬೆಣ್ಣೂರ, ಕಲ್ಲಪ್ಪ ಕಬ್ಬೂರ, ಕಲ್ಲಪ್ಪ ಕೌಜಲಗಿ, ಮಲ್ಲಣ್ಣ ಮದಕರಿ, ಸದಾಶಿವ ಜಗದಾಳ ಮುಂತಾದವರು ಗೌರವಿಸಿದರು. ಪ್ರತಿ ದಿನ ಸಂಜೆ 7.30 ರಿಂದ ರಾತ್ರಿ 9 ರ ವರೆಗೆ ಪ್ರವಚನವಿದ್ದು , ನಂತರ ಪ್ರಸಾದ ಇರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿಸಿದರು.

# ಬೆಳ್ಳಂಬೆಳಗ್ಗೆ ಘರ್ಜಿಸಿದ ಜೆಸಿಬಿಗಳು

## ಅರಣ್ಯ ಇಲಾಖೆ ಜಾಗೆಯಲ್ಲಿನ ಶೆಡ್‌ಗಳ ತೆರವು



**ರಬಕವಿ-ಬನಹಟ್ಟಿ :** ರಬಕವಿ-ಬನಹಟ್ಟಿಯ ಸರ್ವೆ ನಂ.7ರಗುಂಡಯ್ಯನಮಠದಬಳಿಯಅರಣ್ಯಇಲಾಖೆಗೆ ಸೇರಿದ ಜಾಗೆಯನ್ನು ಅತಿಕ್ರಮಣಗೊಳಿಸಿಕೊಂಡು ನಿರ್ಮಿಸಿದ್ದ ಅನಧೀಕೃತ ಶೆಡ್‌ಗಳನ್ನು ಗುರುವಾರ ಬೆಳಗಿನ ಜಾವ ಜೆಸಿಬಿ ಯಂತ್ರಗಳನ್ನು ಬಳಸಿ ತೆರವುಗೊಳಿಸಲಾಯಿತು. ಕಳೆದ ತಿಂಗಳು ಅನಧೀಕೃತ ಶೆಡ್‌ಗಳನ್ನು ತೆರವುಗೊಳಿಸುವಂತೆ ಅತಿಕ್ರಮಣಕಾರರಿಗೆ ಇಲಾಖೆ ನೋಟೀಸ್ ಜಾರಿಗೊಳಿಸಿತ್ತಾದರೂ ಅತಿಕ್ರಮಭಕಾರರು ಸ್ಪಂದಿಸದ ಹಿನ್ನೆಲೆಯಲ್ಲಿ ಇಂದು ಕಂದಾಯ, ಪೋಲೀಸ್, ನಗರಸಭೆ, ಭೂಮಾಪನ ಇಲಾಖೆಗಳ ಅಧಿಕಾರಿಗಳ ಸಮ್ಮುಖದಲ್ಲಿ ತೆರವುಗೊಳಿಸಲಾಯಿತು.

ವಲಯ ಅರಣ್ಯಾಧಿಕಾರಿ ಪವನ ಕುರಿನಿಂಗ, ಎಸಿಎಫ್ ಅಮೃತ ಗುಂಡೋಸಿ, ಉಪವಲಯಾಧಿಕಾರಿ ಮಲ್ಲಿಕಾರ್ಜುನ ನಾವಿ, ರಬಕವಿ-ಬನಹಟ್ಟಿ ಪ್ರಭಾರ ತಹಶೀಲ್ದಾರ ವಿಜಯಕುಮಾರ ಕಡಕೋಳ, ಡಿಎಸ್ಪಿ ಈ.ಶಾಂತವೀರ, ಸಿಪಿಐ ಸಂಜೀವ ಬಳಗಾರ, ಪಿಎಸ್ಸೇಗಳಾದ ಶಾಂತಾ ಹಳ್ಳಿ, ವಿಜಯ ಕಾಂಬಳೆ, ಅಪ್ಪು ಐಗಳಿ, ಮಲ್ಲಪ್ಪ ಮಡ್ಡಿ ನೇತೃತ್ವದಲ್ಲಿ ತೆರವು ಕಾರ್ಯಾಚರಣೆ ನಡೆಸಲಾಯಿತು.

# ಶಿರಾಡ್ ಘಾಟ್ ಗುಡ್ಡ ಕುಸಿತದ ಭೀಕರತೆಗೆ ಸಿಎಂ ಶಾಕ್

## ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಾದೇಶಿಕ ಅಧಿಕಾರಿಗೆ ಸಿಎಂ ಪ್ರಶ್ನೆಗಳ ಸುರಿಮಳೆ

## ಖರ್ಚು ಕಡಿಮೆ ಮಾಡಲು ತಡೆಗೋಡೆ ನಿರ್ಮಿಸದ್ದಕ್ಕೆ, 90 ಡಿಗ್ರಿಯಲ್ಲಿ ಗುಡ್ಡ ಕಡಿದಿರುವುದಕ್ಕೆ ಸಿಎಂ ಆಕ್ರೋಶ

## ಕೇಂದ್ರ ಸಚಿವ ಗಡ್ಕರಿ ಅವರಿಗೆ ಪತ್ರ ಬರೆದು ವಿವರಿಸಲು ತೀರ್ಮಾನ: ಸಿಎಂ ಸಿದ್ದರಾಮಯ್ಯ




**ಶಿರಾಡಿ ಘಾಟ್ :** ಶಿರಾಡ್ ಘಾಟ್ ಗುಡ್ಡ ಕುಸಿತದ ಭೀಕರತೆಗೆ ಶಾಕ್ ಆದಮುಖ್ಯಮಂತ್ರಿಸಿದ್ದರಾಮಯ್ಯ ಅವರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಾದೇಶಿಕ ಅಧಿಕಾರಿ ವಿಲಾಸ್ ಅವರಿಗೆ ಸಾಲು ಸಾಲು ಪ್ರಶ್ನೆಗಳ ಸುರಿಮಳೆಗೈದರು.

ಗುಡ್ಡ ಕುಸಿತದ ಸ್ಥಳ ಪರಿಶೀಲನೆಗೆ ಅಧಿಕಾರಿಗಳ ತಂಡದೊಂದಿಗೆ ರಸ್ತೆ ಮಾರ್ಗವಾಗಿ ಘಟನಾ ಸ್ಥಳಕ್ಕೆ ಆಗಮಿಸಿದ ಮುಖ್ಯಮಂತ್ರಿಗಳು ರಸ್ತೆ ನಿರ್ಮಾಣಕ್ಕಾಗಿ ಗುಡ್ಡಗಳನ್ನು 90 ಡಿಗ್ರಿಯಲ್ಲಿ ನೇರವಾಗಿ ಸೀಳಿರುವುದಕ್ಕೆ ಅಸಮಾಧಾನಗೊಂಡು ಗುಡ್ಡ ಕುಸಿತಕ್ಕೆ ಇದೂ ಕೂಡ ಪ್ರಮುಖ ಕಾರಣ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಸ್ತೆ ಕಾಮಗಾರಿ ಕುರಿತಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಸಿಎಂ ಗೆ ವಿವರಿಸುತ್ತಾ, "ಒಟ್ಟು 45 ಇಟ ನಲ್ಲಿ 35 ಇಟ ಹೈವೇ ಕಾಮಗಾರಿ ಮುಗಿದಿದೆ. 10 ಇಟ ಬಾಕಿ ಇದೆ. ಆದರೆ ಇಲ್ಲಿಯವರೆಗೂ ಎಲ್ಲೂ ತಡೆಗೋಡೆಗಳನ್ನು ನಿರ್ಮಿಸಿಲ್ಲ, ಮಣ್ಣಿನ ಗುಣಮಟ್ಟ ಪರೀಕ್ಷೆ ನಡೆಸಿ ಅದರ ಆದ-ಾರದಲ್ಲಿ ಸುರಕ್ಷತಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಂತೆ ಇಲ್ಲ" ಎಂದು ವಿವರಿಸಿದರು. ಮೊಣ-ಕಾಲುದ್ದದ ಕೆಸರಲ್ಲೇ ಗುಡ್ಡ ಕುಸಿತದ ಜಾಗದುದ್ದಕ್ಕೂ ನಡೆದು ಪರಿಶೀಲಿಸಿದ ಮುಖ್ಯಮಂತ್ರಿಗಳು ಸ್ಥಳದಲ್ಲಿ ಮಣ್ಣು ತೆರವು ಕಾರ್ಯಾಚರಣೆಯಲ್ಲಿತೊಡಗಿದ್ದ ಖಆಖಈ ತಂಡದೊಂದಿಗೆ ಕೆಲ ಹೊತ್ತು ಚರ್ಚಿಸಿದರು. ಬಳಿಕ ಹೆದ್ದಾರಿ ಪ್ರಾಧಿಕಾರದ ಪ್ರಾದೇಶಿಕ ಅಧಿಕಾರಿ ವಿಲಾಸ್ ಅವರ ಮುಂದೆ ಸಿಎಂ ಸಾಲು ಸಾಲು ಪ್ರಶ್ನೆಗಳನ್ನು ಇಟ್ಟರು... *ಹಣ ಉಳಿಸುವ ಉದ್ದೇಶದಿಂದ ಕಡಿಮೆ ಭೂಮಿ ಸ್ವಾಧೀನಗೊಳಿಸಿಕೊಳ್ಳುವುದು, ಬಳಿಕ ಖರ್ಚು ಉಳಿಸಲು 90 ಡಿಗ್ರಿಯಲ್ಲಿ ಗುಡ್ಡಗಳನ್ನು ಕತ್ತ-ರಿಸಿದ್ದೀರಿ. ಇದು ಅವೈಜ್ಞಾನಿಕ ಕಾಮಗಾರಿ ಅಲ್ಲವೇ?

*ಗುಡ್ಡಗಳನ್ನು 30 ರಿಂದ 45 ಡಿಗ್ರಿಯಲ್ಲಿ ಕತ್ತರಿಸಿ ತಡೆಗೋಡೆ ನಿರ್ಮಿಸಿದ್ದರೆ ಮಣ್ಣು ಕುಸಿತವನ್ನು ತಡೆಯಬಹುದಿತ್ತಲ್ಲವೇ?

*ಕಾಮಗಾರಿ ಆರಂಭಿಸುವ ಮೊದಲು ಮಣ್ಣಿನ ಗುಣಮಟ್ಟ ಪರೀಕ್ಷೆ ನಡೆಸಿದ್ದೀರಾ? ಅದಕ್ಕೆ ತಕ್ಕಂತೆ ಮುಂಜಾಗ್ರತಾ ಕ್ರಮ ಏಕೆ ವಹಿಸಿಲ್ಲ ಎಂದು ಪ್ರಶ್ನಿಸಿದರು.

ವಿಲಾಸ್ ಅವರಿಂದ ಸೂಕ್ತ ಉತ್ತರ ಬರದಿದ್ದಾಗ ಒಟ್ಟಾರೆ ಸ್ಥಿತಿ ಗತಿ ಕುರಿತು ಕೇಂದ್ರ ಸಚಿವರಾದ ಗಡ್ಕರಿ ಅವರಿಗೆ ಪತ್ರ ಬರೆಯುವಂತೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೂಚಿಸಿದರು. ಹಾಸನ ಜಿಲ್ಲಾ ಉಸ್ತುವಾರಿ ಸಚಿವ ರಾಜಣ್ಣ, ಶಾಸಕ ಶಿವಲಿಂಗೇ ಗೌಡರು, ಸಂಸದ ಶ್ರೇಯಸ್ ಪಟೇಲ್ , ಲೋಕೋಪಯೋಗಿ ಇಲಾಖೆಕಾರ್ಯದರ್ಶಿಸತ್ಯಬಾರಾಯಣ್ ಸೇರಿ ಹಿರಿಯ ಅಧಿಕಾ-ರಿಗಳ ತಂಡವೇ ಸ್ಥಳದಲ್ಲಿತ್ತು.

# ನರ್ಸಿಂಗ್ ಕಾಲೇಜಿನಲ್ಲಿ ವಿಶ್ವ ಸ್ತನಪಾನ ಸಪ್ತಾಹ



**ತೇರದಾಳ :** ಇಲ್ಲಿನ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯ ದಾನಿಗೊಂಡ ಕಾಲೇಜ್ ಆಪ್ ನರ್ಸಿಂಗ್ ವಿಭಾಗದಲ್ಲಿ ವಿಶ್ವ ಸ್ತನಪಾನ ಸಪ್ತಾಹ ಆಚರಿಸಲಾಯಿತು.

ಈ ಸಂದರ್ಭದಲ್ಲಿ ವಿಶೇಷ ಉಪನ್ಯಾಸ ನೀಡಿದ ದಾನಿಗೊಂಡ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಪ್ರಸೂತಿ ವಿಭಾಗದ ಡಾ. ಸುನಿತಾ ಎಸ್, ಇತ್ತಿಚನ ದಿನಗಳಲ್ಲಿ ತಾಯಂದಿರುವ ಮಕ್ಕಳಿಗೆ ಸ್ತನಪಾನ(ಎದೆ ಹಾಲು) ಕುಡಿಸುವುದನ್ನು ಕಡಿಮೆಗೊಳಿಸುತ್ತಿದ್ದಾರೆ. ಇದರಿಂದ ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳು ಹೆಚ್ಚಾಗಿವೆ. ಮಕ್ಕಳಿಗೆ ಪೌಷ್ಠಿಕತೆ ಹಿತದೃಷ್ಠಿಯಿಂದ ಮಕ್ಕಳಿಗೆ ಸ್ತನಪಾನ ಕುಡಿಸುವುದು ಅವಶ್ಯಕವಾಗಿದೆ. ಆದ್ದರಿಂದ ಈ ದಿಸೆಯಲ್ಲಿ ಸ್ತನಪಾನ ಸಪ್ತಾಹ ಆಚರಿಸುವ ಮೂಲಕ ಸ್ತನಪಾನ ಕೊರತೆಯನ್ನು ಮುಕ್ತಗೊಳಿಸಬೇಕಿದೆ ಎಂದು ಹೇಳಿದರು. ಪ್ರೊ. ಚನ್ನಮ್ಮ ಸ್ತನಪಾನದ ಮಹತ್ವದ ಕುರಿತು ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಡಾ. ಆನಂದಕುಮಾರ ಕಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State